


ಸಂಚಿಕೆ - 02

ಜುಲೈ 2026

# ಅರಿವು ಯಾನ

**ನಮ್ಮ ನಡೆ ಅಸ್ಪೃಶ್ಯತೆ ಮುಕ್ತ ಭಾರತದೆಡೆಗೆ**



# ಒಳಗೆ


01 ಸಮಾಜ ಸುಧಾರಣೆಯತ್ತ ಹೊಸ ಹೆಜ್ಜೆ-ಅರಿವು ಭಾರತ — 03
ನಾ. ದಿವಾಕರ್

02 ದಿನದ ಸುಭಾಷಿತಗಳಲ್ಲಿ ಕೆಲವು..... — 09
ಡಾ. ಎಚ್.ಕೆ. ವಿವೇಕಾನಂದ

03 ಅಸ್ಪೃಶ್ಯತೆ ಉಳಿದಿರುವುದಾದರೂ ಹೇಗೆ? — 11
ಡಾ. ಶಿವಪ್ಪ ಅರಿವು

04 ಸಮಾಜದ ಮತಿಭ್ರಮಣೆ ಮತ್ತು ಅಸಮಾನತೆಯ ಕಂದಕದಿಂದ ಪಾರಾಗಲು ಒಂದು ಆತ್ಮಸಾಕ್ಷಿ ಅಭಿಯಾನ ಅವಶ್ಯವಿದೆ — 13
ಡಾ. ಎಂ. ಆರ್. ರವಿ, ಜಿಲ್ಲಾಧಿಕಾರಿಗಳು, ಕೋಲಾರ

05 ಬೆಳಪನಹಳ್ಳಿ ಗ್ರಾಮದ ಸುಬ್ಬಾರೆಡ್ಡಿ ಅವರ ಮನೆಯಲ್ಲಿ ಸಹಭೋಜನ — 16

06 ತೇರಹಳ್ಳಿಯ ಭವ್ಯ ಮತ್ತು ಕಾವ್ಯ ಅವರ ಮನೆಯಲ್ಲಿ ಸಹಭೋಜನ ಹಾಗೂ ಪ್ರತಿಜ್ಞಾವಿಧಿ — 18

07 ಹೊಸಮಟ್ನಹಳ್ಳಿಯ ನಾರಾಯಣಗೌಡರ ಮನೆಯಲ್ಲಿ ಸಹಭೋಜನ — 19

08 ಶಾರದ ವಿದ್ಯಾ ಸಂಸ್ಥೆಯಲ್ಲಿ ಅರಿವು ಭಾರತ ಪ್ರತಿಜ್ಞೆ — 20

09 ಕೋಲಾರದಲ್ಲಿ ಗ್ರಾಮ ವಿಕಾಸದ MVN ರಾವ್ ನುಡಿ ನಮನ — 21

10 ಪತ್ರಿಕಾ ವರದಿಗಳು — 22

# ಸಮಾಜ ಸುಧಾರಣೆಯತ್ತ
# ಹೊಸ ಹೆಜ್ಜೆ-ಅರಿವು ಭಾರತ

**ಕ್ರಾಂತಿಯ ಕನಸು ಕಟ್ಟುವ ಮುನ್ನ ನೆಲಮಟ್ಟದ ಬದಲಾವಣೆ ಮತ್ತು ಸುಧಾರಣೆ ಅತ್ಯಗತ್ಯ**



**ನಾ. ದಿವಾಕರ್, ಮೈಸೂರು**

ವಿಶ್ವ ಭೂಪಟದಲ್ಲಿ ಇಡೀ ಸಾಮಾಜಿಕ ವ್ಯವಸ್ಥೆಯನ್ನು ಪಲ್ಲಟಗೊಳಿಸಿ ಹೊಸ ದಿಗಂತದತ್ತ ಸಾಗಬೇಕಾದ ಅನಿವಾರ್ಯತೆ ಕಾಣುವುದು ಬಹುಶಃ ಭಾರತದಲ್ಲಿ ಮಾತ್ರ ಎನಿಸುತ್ತದೆ. ಸಾಂಪ್ರದಾಯಿಕತೆ, ಪ್ರಾಚೀನ ಜೀವನ ಮೌಲ್ಯಗಳು, ಮಧ್ಯಕಾಲೀನ ಆದರ್ಶಗಳು ಹಾಗೂ ಸಾಮಾಜಿಕ ನೆಲೆಯಲ್ಲಿ ಎಲ್ಲ ಸ್ತರಗಳಲ್ಲೂ ಇಂದಿಗೂ ಗಟ್ಟಿಯಾಗಿ ನಿಂತಿರುವ ಪುರಾತನ ಆಚರಣೆಗಳು ಭಾರತವನ್ನು ಬೌದ್ಧಿಕವಾಗಿ-ಸಾಂಸ್ಕೃತಿಕವಾಗಿ ಹಿಮ್ಮುಖ ಚಲನೆಗೆ ಈಡುಮಾಡಿವೆ. ಸಮಾನಾಂತರವಾಗಿ ನೋಡಿದರೆ ಭಾರತ ಇಂದು ವೈಜ್ಞಾನಿಕ ಸಾಧನೆಗಳಲ್ಲಿ, ತಂತ್ರಜ್ಞಾನ ಅವಿಷ್ಕಾರ ಮತ್ತು ನಾವೀನ್ಯತೆಗಳಲ್ಲಿ (INNOVATIONS), ವಿಶ್ವದ ಇತರ ಅಭಿವೃದ್ಧಿ ಹೊಂದಿದ ದೇಶಗಳಿಗೆ ಸಮನಾಗಿ ಮುನ್ನಡೆಯುತ್ತಿದೆ. ಇತ್ತೀಚೆಗಷ್ಟೇ ಭಾರತದ ಗಗನಯಾತ್ರಿ ಶುಭಾಂಶು ಶುಕ್ಲ , ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವನ್ನು ಪ್ರವೇಶಿಸಿ ಯಶಸ್ವಿಯಾಗಿ ಹಿಂದಿರುಗಿದ್ದಾರೆ.

ಈ ವಿಶಿಷ್ಟ ಆಯಾಮದಿಂದ ನೋಡಿದಾಗ ನವ ಭಾರತದಲ್ಲಿ ಎರಡು ಸಮಾಜಗಳು ಸಮಾನಾಂತರವಾಗಿ ಭವಿಷ್ಯದ ವಿಕಾಸದ ಕನಸು ಕಟ್ಟುತ್ತಿರುವುದನ್ನು ಗುರುತಿಸಲು ಸಾಧ್ಯ. ಮಾರುಕಟ್ಟೆ ಸೂಚ್ಯಂಕಗಳು ಹಾಗೂ ಮೇಲ್ನೋಟಕ್ಕೆ ಕಾಣುವ ಮೇಲ್ಪದರ ಸಮಾಜದ (ELITE SOCIETY) ಶೀಘ್ರ ಪ್ರಗತಿ ಮತ್ತು ಶೈಕ್ಷಣಿಕ ಶ್ರೇಷ್ಠತೆಯ (ACADEMIC EXCELLENCE) ದೃಷ್ಟಿಯಿಂದ ನೋಡಿದಾಗ ನವ ಭಾರತ ಈಗಾಗಲೇ ವಿಕಾಸ ಹೊಂದಿದೆ ಎಂದೋ ಅಥವಾ ಇನ್ನು ಸ್ವಾತಂತ್ರ್ಯದ ಶತಮಾನೋತ್ಸವದ ವೇಳೆಗೆ (2047) ಪೂರ್ಣ ವಿಕಸಿತ ರಾಷ್ಟ್ರವಾಗಿ ಹೊರಹೊಮ್ಮುತ್ತದೆ ಎಂದೋ ಭಾಸವಾಗುವುದು ಸಹಜ. ಈ ಭರವಸೆಯೊಂದಿಗೆ ಮುನ್ನಡೆಯುವುದು ಸ್ವಾಗತಾರ್ಹವೂ ಹೌದು.

ಆದರೆ ವಿಕಾಸದ ಕನಸು ಕಾಣುತ್ತಿರುವ ಭಾರತದಲ್ಲೇ ಮತ್ತೊಂದು ಸಮಾಜ ಇಂದಿಗೂ ಭೌತಿಕ ನೆಲೆಯಲ್ಲಿ ಜಡತ್ವದತ್ತ ಸಾಗುತ್ತಿದೆ. ಸಮಾಜದ ಕ್ರಿಯಾಶೀಲತೆ-ಚಲನಶೀಲತೆಯನ್ನು ಭಗ್ನಗೊಳಿಸುವ ಸಾಂಸ್ಕೃತಿಕ ಜಡತ್ವ ಮತ್ತು ಪ್ರಾಚೀನ ಮನಸ್ಥಿತಿಗಳಿಗೆ ಈ ಸಮಾಜ ಮುಖ್ಯ ಭೂಮಿಕೆಯೂ ಆಗಿದೆ. ಈ ಎರಡೂ ಸಮಾಜಗಳನ್ನು ಮುಖಾಮುಖಿಯಾಗಿಸಿದಾಗ, ಭಾರತದ ಸಾಂಪ್ರದಾಯಿಕ ಸಮಾಜವು ಶತಮಾನಗಳಿಂದ ರೂಢಿಸಿಕೊಂಡು ಬಂದಿರುವ ಪ್ರಾಚೀನ ನಂಬಿಕೆಗಳು, ಮೌಢ್ಯಾಚರಣೆಗಳು, ಅವೈಚಾರಿಕ-ಅವೈಜ್ಞಾನಿಕ ಮನೋಭಾವ ಹಾಗೂ ಮಧ್ಯಕಾಲೀನ ಊಳಿಗಮಾನ್ಯ-ಪಿತೃಪ್ರಧಾನ ಮೌಲ್ಯಗಳಿಗೆ-ಆಚರಣೆಗಳಿಗೆ ಆತುಕೊಂಡಿರುವುದನ್ನು ಎರಡೂ ಸಮಾಜಗಳಲ್ಲಿ ಕಾಣಬಹುದಾಗಿದೆ. ಮೇಲ್ಪದರ ಸಮಾಜದಲ್ಲಿ ರೂಪಾಂತರಗೊಂಡಿರುವ ಈ ಆಚರಣೆಗಳು ತಳಸ್ತರದ ಸಮಾಜದಲ್ಲಿ ಯಥಾಸ್ಥಿತಿಯಲ್ಲೇ ಕಾಣುವುದು ಪ್ರಜ್ಞಾವಂತ ಸಮಾಜವನ್ನು ಜಾಗೃತಗೊಳಿಸಬೇಕಾದ ವಿಚಾರ.

### ಸುಧಾರಣೆಯ ಮುಂಗಾಣೆಯಲ್ಲಿ

ಹಾಗಾಗಿಯೇ ನವ ಭಾರತೀಯ ಸಮಾಜದಲ್ಲಿ ಕ್ರಾಂತಿಯ ಕೂಗು ಗಟ್ಟಿಯಾಗುತ್ತಿರುವ ಹಾಗೆಯೇ ಮತ್ತೊಂದು

ಬದಿಯಲ್ಲಿ ಸಮಾಜ ಸುಧಾರಣೆಯ ಅಪೇಕ್ಷೆಗಳೂ ವ್ಯಾಪಿಸುತ್ತಿವೆ. ಚಾರಿತ್ರಿಕವಾಗಿ ನೋಡಿದಾಗ ಭಾರತ ಸಮಾಜ ಸುಧಾರಕರ ನಾಡು. ಬುದ್ಧ ಬಸವರಿಂದ ಗಾಂಧಿ-ಅಂಬೇಡ್ಕರ್‌ವರೆಗೆ, ಬೌದ್ಧಿಕ ನೆಲೆಯಲ್ಲಿ, ಆಧ್ಯಾತ್ಮಿಕ ಮಾರ್ಗಗಳ ಮೂಲಕ, ಪ್ರತಿರೋಧದ ಸಿದ್ಧಾಂತಗಳ ಮುಖಾಂತರ ಸಮಾಜದ ಸುಧಾರಣೆಯ ವಿಭಿನ್ನ ಆಯಾಮಗಳಿಗೆ ಸಾಕ್ಷಿಯಾಗಿದೆ. ದುರದೃಷ್ಟವಶಾತ್ ಈ ಪ್ರಯತ್ನಗಳ ನಡುವೆಯೂ ನವ ಭಾರತ ಜಾತಿ ದೌರ್ಜನ್ಯ-ತಾರತಮ್ಯ, ಅಸ್ಪೃಶ್ಯತೆ, ಮಹಿಳಾ ದೌರ್ಜನ್ಯ, ಮಡಿವಂತಿಕೆಯ ಶ್ರೇಷ್ಠತೆ, ಯಜಮಾನಿಕೆಯ ಪಾರಮ್ಯ, ಪುರುಷಪ್ರಧಾನ ಮೌಲ್ಯಗಳ ಮೇಲರಿಮೆ ಇವೇ ಮುಂತಾದ ಮಧ್ಯಕಾಲೀನ ಲಕ್ಷಣಗಳನ್ನು ( MEDIEVAL CHARACTERS) ಕಾಪಾಡಿಕೊಂಡು ಬಂದಿದೆ. ಅಸ್ಪೃಶ್ಯತೆಯನ್ನು ಇಲ್ಲವಾಗಿಸಲು ಅಂಬೇಡ್ಕರ್ ಅನುಸರಿಸಿದ ಜಾತಿ ವಿನಾಶ ಮಾರ್ಗವಾಗಲೀ, ಗಾಂಧಿ ಬೋಧಿಸಿದ ಮೇಲ್ಜಾತಿಯ ಮನಃಪರಿವರ್ತನೆಯ ಹಾದಿಯಾಗಲೀ, ಸ್ವತಂತ್ರ ಭಾರತವನ್ನು ಈ ಸಾಮಾಜಿಕ ವ್ಯಾಧಿಯಿಂದ ಸಂಪೂರ್ಣವಾಗಿ ಮುಕ್ತಗೊಳಿಸಲು ಸಾಧ್ಯವಾಗದಿರುವುದು, ವರ್ತಮಾನದ ಸಮಾಜವನ್ನು ಚಿಂತೆಗೀಡುಮಾಡುವ ವಿಷಯವಾಗಿದೆ.

ಒಂದು ಆಶಾದಾಯಕ ಅಂಶ ಎಂದರೆ, ತಳ ಸಮಾಜದ ಅಳಿವು ಉಳಿವಿಗಾಗಿ ದೇಶವ್ಯಾಪಿಯಾಗಿ ನೂರಾರು ಹೋರಾಟಗಳು ನಡೆಯುತ್ತಿರುವಾಗಲೇ, ಸಮಾಜದ ಮತ್ತೊಂದು ಬದಿಯಲ್ಲಿ ' ಸಮಾಜ ಸುಧಾರಣೆ 'ಯ ಪ್ರಯತ್ನಗಳೂ ಕ್ರಿಯಾಶೀಲವಾಗಿ ನಡೆಯುತ್ತಿವೆ. ಯಾವುದೇ ಸಮಾಜದಲ್ಲಿ / ದೇಶದಲ್ಲಿ ಕ್ರಾಂತಿ ಯಶಸ್ವಿಯಾಗಬೇಕಾದರೆ, ಮೊದಲ ಮೆಟ್ಟಿಲುಗಳಾಗಿ ಕಾಣುವುದು ಸಾಮಾಜಿಕ/ಸಾಂಸ್ಕೃತಿಕ ಬದಲಾವಣೆ ಮತ್ತು ಸುಧಾರಣೆಗಳು ಎನ್ನುವುದು ಚಾರಿತ್ರಿಕ ಸತ್ಯ. ಈ ಸುಧಾರಣೆಯ ದನಿಗಳು/ಹೆಜ್ಜೆಗಳು ನೂರಾರು ಸಂಖ್ಯೆಯಲ್ಲಿ ಕಾಣಬಹುದಾದರೂ, ನಮ್ಮ ನಡುವೆಯೇ ಇಂತಹ ಒಂದು ಹೆಜ್ಜೆಗುರುತುಗಳು ಕ್ರಿಯಾಶೀಲವಾಗಿರುವುದನ್ನು ಕಂಡಾಗ, ಪ್ರಜ್ಞಾವಂತ ಮನಸ್ಸು ಪುಳಕಿತಗೊಂಡು, ಭರವಸೆಯ ನಿಟ್ಟುಸಿರು ಬಿಡುತ್ತದೆ. ಈ ಸದಾಶಯಕ್ಕೆ ಪೂರಕವಾಗಿ ನಮಗೆ ಗೋಚರಿಸಬೇಕಿರುವುದು ಕೋಲಾರ ಜಿಲ್ಲೆಯಲ್ಲಿ ಸಮಾಜ ಸುಧಾರಣೆಯ ಹಾದಿಯಲ್ಲಿ, ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಅಹರ್ನಿಶಿ ಶ್ರಮಿಸುತ್ತಿರುವ " ಅರಿವು ಭಾರತ " ಎಂಬ ಸಂಸ್ಥೆ.

**ಅರಿವಿನ ಪಯಣ-ಒಂದು ವಿಶಿಷ್ಟ ಮಾದರಿ**

ಡಾ. ಬಿ. ಆರ್. ಅಂಬೇಡ್ಕರ್ ಅಸ್ಪೃಶ್ಯತೆಯನ್ನು ಮೇಲ್ಜಾತಿಗಳ ಹಾಗೂ ಈ ಸಮಾಜವೇ ಸೃಷ್ಟಿಸಿರುವ ಜಾತಿವ್ಯವಸ್ಥೆಯ ನಿರಂತರತೆಯಲ್ಲಿ ಬೇರೂರಿರುವ ಸಮಸ್ಯೆ ಎಂದೇ ಕಾಣುತ್ತಾರೆ. ಇಂದಿಗೂ ವಾಸ್ತವ ಎನಿಸುವ ಈ ದಾರ್ಶನಿಕ ಮುನ್ನೋಟವನ್ನು ವಿಸ್ತರಿಸಿ ನೋಡಿದಾಗ, ಅಸ್ಪೃಶ್ಯತೆ ಕೇವಲ ಬ್ರಾಹ್ಮಣ ಸಮುದಾಯಕ್ಕೆ ಸೀಮಿತವಾಗಿರದೆ, ತಳಸ್ತರದ ಜಾತಿಗಳನ್ನು ಹೊರತುಪಡಿಸಿ ಉಳಿದೆಲ್ಲಾ ಸಮುದಾಯಗಳಲ್ಲೂ ಬೇರೂರಿರುವುದನ್ನು ಸಮಕಾಲೀನವಾಗಿ ಗುರುತಿಸಬಹುದು. ಇನ್ನೂ ವಿಶೇಷ ಎಂದರೆ ಕೆಲವು ಬುಡಕಟ್ಟು ಸಮುದಾಯಗಳೂ ಸಹ ದಲಿತರ ಒಂದು ವರ್ಗವನ್ನು ಅಸ್ಪೃಶ್ಯರನ್ನಾಗಿ ನೋಡುವುದನ್ನೂ ಗುರುತಿಸಬಹುದು. ಹಾಗಾಗಿ ಈ ಹೀನ-ಅಮಾನುಷ ಸಾಮಾಜಿಕ ಆಚರಣೆಯನ್ನು ಬುಡಮಟ್ಟದಿಂದಲೇ ಕಿತ್ತುಹಾಕಬೇಕೆಂದರೆ ಅದು ಮೇಲ್ಜಾತಿಯ ನೆಲೆಯಲ್ಲೇ ಆರಂಭವಾಗಬೇಕು ಎಂಬ ಒಂದು ಆಶಯ ನಮ್ಮ ಸಾಮಾಜಿಕ ಅರಿವಿನ ಒಂದು ಭಾಗ.

ಗಾಂಧಿ ಇದನ್ನು ಮನಃಪರಿವರ್ತನೆಯ ನೆಲೆಯಲ್ಲಿ ವ್ಯಾಖ್ಯಾನಿಸಿದ್ದರು. ಆದರೆ ಭೌತಿಕವಾಗಿ ತಳಮಟ್ಟದ ಆಚರಣೆಗಳಲ್ಲಿ ಅಳವಡಿಸದ ಹೊರತು, ಇದು ಪೂರ್ಣಪ್ರಮಾಣದಲ್ಲಿ ಸಾಕಾರಗೊಳ್ಳುವುದಿಲ್ಲ ಎಂಬ ಅರಿವೂ ಸ್ವತಂತ್ರ ಭಾರತದ ಸಾಮಾಜಿಕ ಹೋರಾಟಗಳು ಮೂಡಿಸಿವೆ. ಈ ದೃಷ್ಟಿಯಿಂದ ಕೋಲಾರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತಿಹಾಸ ಸಹಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಡಾ. ಶಿವಪ್ಪ 2014ರಲ್ಲಿ ಹುಟ್ಟುಹಾಕಿದ ಒಂದು ಸಮಾಜ ಸುಧಾರಕ ಸಂಸ್ಥೆ ' ಅರಿವು ಭಾರತ '. ಈಗ

ಅವರ ಮೂಲ ನಾಮಧೇಯದೊಡನೆ 'ಅರಿವು' ಸೇರಿಕೊಂಡಿದ್ದು, ಅರಿವು ಶಿವಪ್ಪ ಎಂದೇ ಖ್ಯಾತಿ ಪಡೆದಿದ್ದಾರೆ. ಯಾವುದೇ ಬದಲಾವಣೆ ಅಥವಾ ಸುಧಾರಣೆಯ ಪ್ರಯತ್ನಗಳು, ಇದನ್ನು ಅಪೇಕ್ಷಿಸುವ ವ್ಯಕ್ತಿಯ ನೆಲೆಯಲ್ಲೇ ಆರಂಭವಾಗಬೇಕು ಎಂಬ ತತ್ವಶಾಸ್ತ್ರೀಯ ಚಿಂತನೆಗೆ ಓಗೊಟ್ಟಿರುವ ಡಾ. ಶಿವಪ್ಪ, ತಮ್ಮ ' ಅರಿವು ಭಾರತ ' ಸಂಸ್ಥೆಯ ಮೂಲಕ ಇದನ್ನು ಸಾಕಾರಗೊಳಿಸುತ್ತಿದ್ದಾರೆ.

**ವೈಯುಕ್ತಿಕವು ರಾಜಕೀಯವಾದಾಗ...**

ವೈಯುಕ್ತಿಕವಾಗಿ ನನ್ನ ತವರು ಜಿಲ್ಲೆಯವರಾಗಿ, ನಾನು ವ್ಯಾಸಂಗ ಮಾಡಿದ ಕಾಲೇಜಿನಲ್ಲಿ ಬೋಧಕರಾಗಿ, ನನ್ನ ಮಡದಿಯ ತವರಿನಲ್ಲಿ (ಮುಳಬಾಗಿಲು) ಈ ಸುಧಾರಣೆಯ ಪ್ರಥಮ ಹೆಜ್ಜೆಯನ್ನಿರಿಸಿರುವುದು, ವ್ಯಕ್ತಿಗತ ನೆಲೆಯಲ್ಲಿ ನನಗೆ ಹೆಮ್ಮೆಯ ವಿಚಾರ. ಮುಳಬಾಗಿಲು ತಾಲ್ಲೂಕಿನ ಗೊಲ್ಲಹಳ್ಳಿ ಗ್ರಾಮದಲ್ಲಿ, ತಮ್ಮ ಮನೆಯಲ್ಲೇ ನಡೆದ ವಾರ್ಷಿಕ ಪುಣ್ಯತಿಥಿ ಕಾರ್ಯಕ್ರಮವೊಂದರಲ್ಲಿ, ಕೆಲವು ಜನರು, ಅಸ್ಪೃಶ್ಯರಾದ ಕಾರಣಕ್ಕೆ, ಮನೆಯ ಹೊರಗೇ ಕುಳಿತಿರುವುದನ್ನು ಕಂಡ ಡಾ. ಶಿವಪ್ಪ ಅವರಲ್ಲಿ ಆ ಕ್ಷಣವೇ ಉದ್ದೀಪನಗೊಂಡ ಪ್ರತಿರೋಧದ ಅಂತರ್ದನಿ ಇಂದು " ಅರಿವು ಭಾರತ ' ಎಂಬ ವಿಶಾಲ ಆಲದ ಮರದಂತೆ ವ್ಯಾಪಿಸಿರುವುದು ಯಾರಿಗೇ ಆದರೂ ಹೆಮ್ಮೆಯ ವಿಚಾರ. 2014ರ ಜುಲೈ 30ರಂದು ಕಂಡುಬಂದ ಆ ಬೆಳಕಿನ ಕಿಡಿ ಇಂದು ಒಂದು ಚಲನಶೀಲ ಜ್ಯೋತಿಯಾಗಿ ರಾಜ್ಯಾದ್ಯಂತ ಬೆಳಕು ಚೆಲ್ಲಲು ಹೊರಟಿರುವುದು, ಹೆಮ್ಮೆಯ ವಿಚಾರವಲ್ಲವೇ ?

'ಅರಿವು ಭಾರತ' ಸಂಸ್ಥೆಯ ಪಯಣದ ಮಾದರಿ ಮತ್ತು ದಿಕ್ಕು ವಿಭಿನ್ನವಾಗಿ ಕಾಣುವುದು ಅದರ ಮೂಲ ಉದ್ದೇಶ ಮತ್ತು ಕಾರ್ಯಸೂಚಿಯಲ್ಲಿ. ಸಾಮಾನ್ಯವಾಗಿ ದಲಿತರನ್ನು, ಅದರಲ್ಲೂ ಅಸ್ಪೃಶ್ಯ ಸಮುದಾಯದ ಜನರನ್ನು ತಮ್ಮ ಮನೆಯೊಳಗೆ ಪ್ರವೇಶಿಸಲು ಅವಕಾಶವೀಯದ ಮೇಲ್ಜಾತಿಯವರಲ್ಲಿ ಈ ಪಿಡುಗಿನ ವಿರುದ್ಧ ದನಿ ಮೂಡಿಸುವುದಾದರೂ ಹೇಗೆ ? ಗ್ರಾಂಥಿಕ ಬೋಧನೆಯೊಂದೇ ಸಾಕಾಗುವುದಿಲ್ಲ ಎನ್ನುವುದು ಕಟುವಾಸ್ತವ. ಇಲ್ಲಿ ಡಾ. ಶಿವಪ್ಪ ಅನುಸರಿಸಿದ ಭಿನ್ನ ಮಾರ್ಗ ಎಂದರೆ, ದಲಿತರ ಮನೆಯಲ್ಲಿ ಸವರ್ಣೀಯರು ಸಹಭೋಜನ ಮಾಡುವುದಷ್ಟೇ ಅಲ್ಲದೆ, ಸವರ್ಣೀಯರ ಮನೆಯಲ್ಲಿ ದಲಿತರೊಟ್ಟಿಗೆ ಕುಳಿತು ಉಣ್ಣುವ ವಿಧಾನ. ಇಲ್ಲಿ ಆಹಾರ ಎಂದರೆ ಒಂದು ಕಪ್ ಚಹಾ ಸಹ ಆಗಬಹುದು, ಭೂರಿ ಭೋಜನವೂ ಆಗಬಹುದು. ಒಟ್ಟಿನಲ್ಲಿ ಕೂಡಿಬಾಳುವ-ಕೂಡಿ ತಿನ್ನುವ ಒಂದು ಸಂಸ್ಕೃತಿಯನ್ನು ಗುರುತಿಸಬಹುದು. ಈ ವಿಭಿನ್ನ ಮಾದರಿಯೇ ' ಅರಿವು ಭಾರತ 'ದ ನಡಿಗೆಯನ್ನು ವಿಶಿಷ್ಟವಾಗಿಸಿದೆ.

ಹಲವು ಆಯಾಮಗಳಲ್ಲಿ ವಿಸ್ತರಿಸಿರುವ ಈ ಸುಧಾರಣಾ ಮಾದರಿಯಲ್ಲಿ, ದಲಿತರು ಮತ್ತು ಸವರ್ಣೀಯರು ಪರಸ್ಪರ ಮನೆಯೊಳಗೆ ಪ್ರವೇಶಿಸುವ ಮತ್ತು ಚಹಾ ಸೇವಿಸುವ ಚಿಂತನೆಯೇ ಅಭೂತಪೂರ್ವ ಎನ್ನಬಹುದು. ಇದು ಮೇಲ್ಜಾತಿ ಸಮಾಜಗಳನ್ನು ಬುಡಮಟ್ಟದಿಂದಲೇ ಪರಿವರ್ತನೆಯೆಡೆಗೆ ಕೊಂಡೊಯ್ಯಬಹುದು ಎಂಬ ಭ್ರಮೆಗೊಳಗಾಗದೆ, ಇಂತಹ ಒಂದೆರಡು ಪ್ರಯತ್ನಗಳು ಪ್ರತಿ ಗ್ರಾಮದಲ್ಲೂ ನಡೆದರೆ, ಅಸ್ಪೃಶ್ಯತೆ ಎಂಬ ಒಂದು ಸಾಮಾಜಿಕ ಕಳಂಕವನ್ನು ಹೋಗಲಾಡಿಸುವ ಸಣ್ಣ ಹಣತೆಯಾಗಿ ಕಾಣುತ್ತದೆ. ಈ ಪ್ರಾಚೀನ-ಅಮಾನವೀಯ ಆಚರಣೆ ಶತಮಾನಗಳಿಂದ ಸೃಷ್ಟಿಸಿರುವ ಪ್ರತ್ಯೇಕತೆಯ-ಹೊರಗಿಡುವ ಚಿಂತನಾಧಾರೆಯನ್ನು ಮತ್ತು ನಿರ್ಮಿಸಿರುವ 'ಅನ್ಯತೆಯ' ಗೋಡೆಗಳನ್ನು ಶಾಶ್ವತವಾಗಿ ಕೆಡವಿಹಾಕುವ ಈ ಪ್ರಯತ್ನ ಡಾ. ಶಿವಪ್ಪ ಅವರ ನೇತೃತ್ವದಲ್ಲಿ ಯಶಸ್ವಿಯಾಗಿ ನೆರವೇರುತ್ತಿದೆ. ಈ ಪರಿಶ್ರಮದ ಪ್ರತಿಫಲವನ್ನು ಇಂದು ಕೋಲಾರ ಜಿಲ್ಲೆಯ 60 ಗ್ರಾಮಗಳ 150ಕ್ಕೂ ಹೆಚ್ಚು ಸವರ್ಣೀಯರ ಮನೆಗಳ ಮುಂದೆ ನೇತುಹಾಕಿರುವ " ಇದು ಅಸ್ಪೃಶ್ಯತೆ ಮುಕ್ತ ಮನೆ " ಎಂಬ ಫಲಕದಲ್ಲಿ ಕಾಣುತ್ತದೆ.

**ದೇಶಭಾಷೆಗಳ ಗಡಿ ಮೀರಿದ ನಡಿಗೆ**

'ಅರಿವು ಭಾರತ'ದ ದೀರ್ಘ ನಡಿಗೆಗೆ ಗಡಿರೇಖೆಗಳಿಲ್ಲ ಅಥವಾ ಇದರ

ಮೈಲುಗಲ್ಲುಗಳನ್ನೂ ಸಂಸ್ಥಾಪಕ ಶಿವಪ್ಪ ಅಷ್ಟಾಗಿ ಸಂಭ್ರಮಿಸುವುದಿಲ್ಲ ಏಕೆಂದರೆ ಇಂದಿಗೂ ಭಾರತದ ಕೋಟ್ಯಂತರ ಮನೆಗಳಲ್ಲಿ ಇಂತಹ ಒಂದು ಫಲಕ ತೂಗಿಹಾಕುವುದು ದುಸ್ಸಾಧ್ಯ ಎಂಬ ' ಅರಿವು' ಅವರಲ್ಲಿದೆ. ಈ ಮಿತಿಯನ್ನು ದಾಟಲು ಅನುಸರಿಸಬೇಕಾದ ಕ್ರಮಗಳು ಹಲವಾರು. ಅದರಲ್ಲಿ ಶಿವಪ್ಪ ಅವರ ಸಂಸ್ಥೆ ಕಂಡುಕೊಂಡಿರುವ ಹೆಜ್ಜೆ ಎಂದರೆ, ಶಾಲಾ ಕಾಲೇಜುಗಳನ್ನು ಸಂಪರ್ಕಿಸಿ ಅಲ್ಲಿ ವ್ಯಾಸಂಗ ಮಾಡುವ ಶಿಕ್ಷಣಾರ್ಥಿಗಳಿಗೆ "ಭಾರತವನ್ನು ಅಸ್ಪೃಶ್ಯ ಮುಕ್ತ ಮಾಡುವ "ಪ್ರತಿಜ್ಞಾ ವಿಧಿಯನ್ನು ಬೋಧಿಸುವುದು. ಸಹಸ್ರಾರು ಶಾಲಾಕಾಲೇಜುಗಳಲ್ಲಿ ಈ ಉದಾತ್ತ ಮಾದರಿಯನ್ನು ಅಳವಡಿಸಲಾಗಿದ್ದು ಇಂದಿಗೂ ಈ ಅರಿವಿನ ನದಿಯ ಹರಿವು ನಿಂತಿಲ್ಲ. ಭವಿಷ್ಯ ಭಾರತದ ನಿರ್ಮಾತೃಗಳಾಗಿ ರೂಪುಗೊಳ್ಳುವ ಮಿಲೆನಿಯಂ ಮಕ್ಕಳಲ್ಲಿ ಮೂಡುವ ಈ ಔದಾತ್ಯ ಭಾರತವನ್ನು ನಿಜವಾಗಿಯೂ ವಿಕಸಿತ ಮಾಡುವ ಒಂದು ಕ್ರಿಯೆ ಆಗಿದೆ.

'ಅರಿವು ಭಾರತ' ಸಂಸ್ಥೆಯು ಅನುಸರಿಸುತ್ತಿರುವ ಮತ್ತೊಂದು ಮಾರ್ಗ ಅಸ್ಪೃಶ್ಯರ ದೇವಾಲಯ ಪ್ರವೇಶದ ಕಾರ್ಯಕ್ರಮಗಳು. ಡಾ. ಅಂಬೇಡ್ಕರ್ ಅವರು ಚಾಲನೆ ನೀಡಿದ ಈ ಕ್ರಾಂತಿಕಾರಿ ನಡೆಗೆ ಸಾಂಸ್ಥಿಕ ಸ್ವರೂಪ ನೀಡುವ ಮೂಲಕ ಡಾ. ಶಿವಪ್ಪ ಸರ್ಕಾರದ ನಿಯಂತ್ರಣದಲ್ಲಿರುವ ಮುಜರಾಯಿ ದೇವಸ್ಥಾನಗಳಲ್ಲಿ ಅಸ್ಪೃಶ್ಯರಿಗೆ ಪ್ರವೇಶದ ಹಕ್ಕು ನೀಡುವ ನಿಟ್ಟಿನಲ್ಲಿ ನೂರಾರು ಗ್ರಾಮಗಳನ್ನು ಸಂಚರಿಸಿದ್ದಾರೆ. ಇಂದು ಈ ಗ್ರಾಮಗಳಲ್ಲಿ ದೇವಸ್ಥಾನಗಳ ಹೊರಗೆ " ಈ ದೇವಾಲಯಕ್ಕೆ ಜಾತಿ ಧರ್ಮ ಲಿಂಗ ಭೇದವಿಲ್ಲದೆ ಎಲ್ಲರಿಗೂ ಮುಕ್ತ ಪ್ರವೇಶವಿದೆ "ಎಂಬ ಫಲಕಗಳು ಕಾಣುತ್ತಿದ್ದರೆ ಅದರ ಹಿಂದೆ ' ಅರಿವು ಭಾರತ 'ದ ಹೆಜ್ಜೆ ಗುರುತುಗಳು ಇರುತ್ತದೆ. ದೇವಸ್ಥಾನಕ್ಕೆ ಹೋಗುವುದು, ದೈವಭಕ್ತಿಯನ್ನು ತೋರುವುದು ವ್ಯಕ್ತಿಗತವಾದರೂ, ಈ ಪ್ರವೇಶದ ಹಕ್ಕನ್ನು ಅಸ್ಪೃಶ್ಯ ಸಮಾಜದಿಂದ ಕಸಿದುಕೊಂಡಿದ್ದ ಶ್ರೇಣೀಕೃತ ಜಾತಿ ವ್ಯವಸ್ಥೆಗೆ ಈ ' ಪ್ರವೇಶ 'ದ ಪ್ರಕ್ರಿಯೆಯೇ ಸೆಡ್ಡುಹೊಡೆದಂತಾಗುತ್ತದೆ. ಅಂಬೇಡ್ಕರ್ ಅವರ ಹೋರಾಟವೂ ಈ ಹಕ್ಕು ಪ್ರತಿಪಾದನೆಯ ದೃಷ್ಟಿಯಿಂದಲೇ ನಡೆದಿದ್ದನ್ನು ಸ್ಮರಿಸಬಹುದು.



ಈ ವಿಭಿನ್ನ ಹಾದಿಯಲ್ಲಿ ಸಮಾಜ ಸುಧಾರಣೆಯ ಗುರಿಯಿಟ್ಟುಕೊಂಡು, ಶತಮಾನಗಳ ಸಾಮಾಜಿಕ ವ್ಯಾಧಿ, ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಶಿವಪ್ಪ ಅವರ 'ಅರಿವು ಭಾರತ' ಗ್ರಾಮಗಳಲ್ಲಿ ಸಾರ್ವಜನಿಕ ಕೆರೆಗಳ ನೀರಿನ ಬಳಕೆಯನ್ನು ಸಾರ್ವತ್ರಿಕಗೊಳಿಸುವ ಪ್ರಯತ್ನಗಳಲ್ಲೂ ಯಶಸ್ವಿಯಾಗಿದೆ. ಮತ್ತೊಂದು ಆಯಾಮದಲ್ಲಿ ಭಾರತದ ಸಾಂಪ್ರದಾಯಿಕ ಸಮಾಜ ತನ್ನ ಮಡಿ-ಮೈಲಿಗೆಯ ಪರಿಕಲ್ಪನೆಯ ಚೌಕಟ್ಟಿನೊಳಗೆ, ಗಂಡನನ್ನು ಕಳೆದುಕೊಂಡ ಮಹಿಳೆಯನ್ನೂ ಅಪವಿತ್ರ ಎಂದು ಭಾವಿಸುವ ಮನೋಭಾವವನ್ನು ಹೋಗಲಾಡಿಸುವ ಪ್ರಯತ್ನಗಳಿಗೂ ಅರಿವು ಭಾರತ ಮುಂದಾಗಿದೆ. ವಿಧವೆಯರಿಗೆ ಮರುಮದುವೆಯಾಗುವ ಅವಕಾಶ ಕಲ್ಪಿಸಲು ಒಂದು ವೇದಿಕೆಯನ್ನೇ ಸೃಷ್ಟಿಸಲಾಗಿದ್ದು , ಹಲವು ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ. ಇದರ ಫಲ, ನೂರಾರು ಪರಿತ್ಯಕ್ತ ಮಹಿಳೆಯರು ಮತ್ತೊಮ್ಮೆ ವಿವಾಹಿತರಾಗಿ ಸುಖಜೀವನ ಸಾಗಿಸುತ್ತಿದ್ದಾರೆ.

### ಹೆಗಲು ನೀಡಿದ ನೂರಾರು ಕೈಗಳೊಂದಿಗೆ

ಯಾವುದೇ ಸಮಾಜ ಸುಧಾರಣೆಯ ಹೆಜ್ಜೆಗಳನ್ನು ಗುರುತಿಸುವಾಗ ಅಂಕಿ ಸಂಖ್ಯೆಗಳನ್ನು ನೋಡುವುದು ಬೇಕಿಲ್ಲ, ಈ ಹೆಜ್ಜೆಗಳ ದೀರ್ಘ ಪಯಣದಲ್ಲಿ ಸಮಾಜದಲ್ಲಿ ಹೊಸ ಅರಿವು ಎಷ್ಟರಮಟ್ಟಿಗೆ ಮೂಡಿದೆ ಎನ್ನುವುದು ಮುಖ್ಯವಾಗುತ್ತದೆ. ಸನಾತನ ಧರ್ಮದ ಮೌಲ್ಯಗಳು ಇಂದಿಗೂ ನಿರ್ದೇಶಿಸುವ ಜಾತಿ ವ್ಯವಸ್ಥೆಯ ಮೂಲ

ಸ್ವರೂಪವನ್ನು ಬದಲಿಸಲು ಇಂತಹ ಸಹಸ್ರಾರು ಹೆಜ್ಜೆಗಳು, ಕೋಟ್ಯಂತರ ಹೆಗಲುಗಳೊಂದಿಗೆ ನೊಗ ಹೊತ್ತು ಸಾಗಬೇಕಿದೆ. ಇಲ್ಲಿ ಎದುರಾಗುವ ತೊಡಕುಗಳು ಜಾತಿವ್ಯವಸ್ಥೆಯಷ್ಟೇ ವೈವಿಧ್ಯಮಯ. ಎಲ್ಲ ಗ್ರಾಮಗಳೂ ಈ ಹೆಜ್ಜೆಗಳಿಗೆ ಊರುವ ಅವಕಾಶ ನೀಡುವುದಿಲ್ಲ ಅಥವಾ ಅದರೊಳಗಿನ ಒಂದು ಸಮಾಜ/ಸಮುದಾಯದ ಆರ್ಥಿಕ ಪ್ರಾಬಲ್ಯ, ಸಾಮಾಜಿಕ ಅಂತಸ್ತು ಮತ್ತು ಸಾಂಸ್ಕೃತಿಕ ವಾರಸುದಾರಿಗೆ ಅಡ್ಡಗೋಡೆಗಳಾಗಿ ಪರಿಣಮಿಸುತ್ತವೆ. ' ಅರಿವು ಭಾರತ ' ಡಾ. ಶಿವಪ್ಪ ಅವರ ಮುಂದಾಳತ್ವದಲ್ಲಿ ಈ ಗೋಡೆಗಳನ್ನು ದಾಟಿ ಮುನ್ನಡೆದಿರುವುದು ಹರ್ಷದಾಯಕ ವಿಚಾರ.

ಕೋಲಾರ ಜಿಲ್ಲೆ ಕರ್ನಾಟಕದ ದಲಿತ ಚಳುವಳಿಯ ಉಗಮ ಸ್ಥಾನಗಳಲ್ಲೊಂದು. ಹಾಗೆಯೇ ಊಳಿಗಮಾನ್ಯ ಯಜಮಾನಿಕೆ, ಜಾತಿ ಶ್ರೇಣಿಯ ಪಾರಮ್ಯ ಹಾಗೂ ಇದರಿಂದ ಉಗಮಿಸುವ ದೌರ್ಜನ್ಯ-ತಾರತಮ್ಯಗಳಿಗೂ ತವರು ಜಿಲ್ಲೆ ಇದು. ಇಂತಹ ಒಂದು ಜಿಲ್ಲೆಯಲ್ಲಿ ತಮ್ಮ ಪ್ರಥಮ ಹೆಜ್ಜೆ ಇರಿಸುವ ಮೂಲಕ ಡಾ. ಶಿವಪ್ಪ, ಸಮಾಜ ಸುಧಾರಣೆಯ ಒಂದು ಮಾದರಿಯನ್ನು ನಮ್ಮ ಮುಂದೆ ತೆರೆದಿಟ್ಟಿದ್ದಾರೆ. ಅವರೇ ಒಂದೆಡೆ ಹೇಳುವಂತೆ, ಈ ನಡಿಗೆಗೆ ಸಹಸ್ರಾರು ಜನರು ಕೈಜೋಡಿಸಬೇಕಿದೆ. ' ಅರಿವು ಭಾರತ'ದ ಪಯಣದಲ್ಲಿ ಕಾಣಬಹುದಾದ ಒಂದು ಗುಣಾತ್ಮಕ ಅಂಶ ಎಂದರೆ, ಈ ರೀತಿ ಜೋಡಿಸುವ ಕೈಗಳು ನೂರಾರು ಸಂಖ್ಯೆಯಲ್ಲಿ ಸ್ವಪ್ರೇರಣೆಯಿಂದ ಮುಂದೆ ಬಂದಿರುವುದು. ಚಿಂತಕರು, ಸಾಹಿತಿಗಳು, ಕಲಾವಿದರು, ದಲಿತ ಚಳುವಳಿಯ ಸಂಗಾತಿಗಳು, ಎಡ-ಬಲ ಪಂಥೀಯರು, ಗ್ರಾಮಗಳ ಹಿರೀಕರು ಹೀಗೆ ವೈವಿಧ್ಯಮಯ ಚಿಂತನಾಧಾರೆಗಳನ್ನು ಪ್ರತಿನಿಧಿಸುವ ಒಂದು ಸಮಾಜ ಈ ಅಭಿಯಾನದ ಭಾಗವಾಗಿದೆ.

**ಭವಿತವ್ಯದ ಬೆಳಕಾಗಿ**

ಇತ್ತೀಚೆಗೆ ' ಅರಿವು ಭಾರತ ' ತನ್ನ ಹತ್ತು ವರ್ಷಗಳ ಪಯಣದ ನೆನಪಿನಲ್ಲಿ ಹೊರತಂದಿರುವ ' ಒಳ-ಹೊರಗು -ಅಸ್ಪೃಶ್ಯತೆಯ ಸುಧಾರಣೆಯ ಹೆಜ್ಜೆಗಳು ' ಎಂಬ ಗ್ರಂಥ ಸಚಿತ್ರ ದರ್ಶನವನ್ನು ನೀಡುವಂತಿದ್ದು , ಡಾ.ಶಿವಪ್ಪ ಮತ್ತು ಅವರೊಡನೆ ನಿರಂತರವಾಗಿ ಕೈಜೋಡಿಸುತ್ತಿರುವ 30 ಜನರ ಒಂದು ತಂಡದ ಪರಿಚಯವನ್ನೂ ಮಾಡಿಕೊಡುತ್ತದೆ. ಈ ಕೃತಿಯಲ್ಲಿರುವ ವಿದ್ವತ್‌ಪೂರ್ಣ ಲೇಖನಗಳು ಚಾರಿತ್ರಿಕವಾಗಿ-ಸಮಕಾಲೀನವಾಗಿ ಅಸ್ಪೃಶ್ಯತೆಯ ವಿಭಿನ್ನ ಆಯಾಮಗಳನ್ನು ಚರ್ಚಿಸುತ್ತವೆ. ನಾಡಿನ ಹಲವಾರು ಚಿಂತಕರು ಇದಕ್ಕೆ ಅಕ್ಷರ ಕೊಡುಗೆ ನೀಡಿದ್ದಾರೆ. ಎಲ್ಲಕ್ಕಿಂತಲೂ ಮಿಗಿಲಾಗಿ 'ಅರಿವು ಭಾರತ'ದ ಅಸ್ಪೃಶ್ಯತಾ ನಿವಾರಣೆಯ ಸುಧಾರಕ ಹೆಜ್ಜೆಗಳು ನಿರರ್ಥಕವಾಗಿಲ್ಲ /ಆಗುತ್ತಿಲ್ಲ / ಆಗುವುದೂ ಇಲ್ಲ ಎಂಬ ಒಂದು ಭರವಸೆಯ ಬೆಳಕನ್ನು ಈ ಗ್ರಂಥ ಹೊರಸೂಸುತ್ತದೆ.

ಈ ಗ್ರಾಂಥಿಕ ಆಕರಗಳನ್ನು ದಾಟಿ, ತೆರೆದ ಕಣ್ಣುಗಳಿಂದ, ಮುಕ್ತ ಹೃದಯದ ಮುಖಾಂತರ 'ಅರಿವು ಭಾರತ' ಸಾಗುತ್ತಿರುವ ಹಾದಿಯನ್ನು ಗಮನಿಸಿದಾಗ, ಸಮಾಜ ಸುಧಾರಣೆ ಅಥವಾ ಅಸ್ಪೃಶ್ಯತೆಯಂತಹ ಸಾಮಾಜಿಕ ವ್ಯಾಧಿಯನ್ನು ಗುಣಪಡಿಸುವ ಮನಸ್ಸಿರುವ ಯಾವುದೇ ವ್ಯಕ್ತಿ ಅಥವಾ ಸಂಘಟನೆಗೆ, ಒಂದು ಹೋರಾಟದ ಮಾದರಿ ಕಾಣಸಿಗುತ್ತದೆ. ರಾಜ್ಯದ ಎಲ್ಲ ಜಿಲ್ಲೆಗಳಿಗೂ ಇದು ವ್ಯಾಪಿಸಬೇಕು ಎಂಬ ಡಾ ಶಿವಪ್ಪ ಅವರ ಆಶಯಕ್ಕೆ ಸ್ಪಂದಿಸುವುದು, ' ಅರಿವು ಭಾರತ 'ವನ್ನು ಈವರೆಗೂ ಸ್ಪರ್ಶಿಸದ ಇನ್ನಿತರ ಗ್ರಾಮಗಳ ಮತ್ತು ಈ ಗ್ರಾಮಗಳಲ್ಲಿ ಸುಧಾರಣೆ-ಬದಲಾವಣೆ-ಕ್ರಾಂತಿಗಾಗಿ ಹಂಬಲಿಸಿ ಅಹರ್ನಿಶಿ




ಹೋರಾಡುತ್ತಿರುವ ' ಪ್ರಗತಿಪರ ಸಂಘಟನೆಗಳ ನೈತಿಕ ಜವಾಬ್ದಾರಿ. ಸಂವಿಧಾನದ ಅರಿವು ಮೂಡಿಸುವ ಬೃಹತ್ ಅಭಿಯಾನದೊಂದಿಗೆ ' ಅರಿವು ಭಾರತ ' ಸುಧಾರಕ ಹೆಜ್ಜೆಗಳೂ ಬೆರೆಯುವುದಾದರೆ, ಬಹುಶಃ ನಮ್ಮ ಸಮಾಜದಲ್ಲಿ ಬೇರೂರಿರುವ, ರೂಪಾಂತರಗೊಂಡು ಗಟ್ಟಿಯಾಗುತ್ತಿರುವ, ಸಾಮಾಜಿಕ ತರತಮಗಳನ್ನು ನಿವಾರಿಸಲು ಸಾಧ್ಯವಾಗಬಹುದು.

ಈ ಅಭೀಷ್ಟೆಯೊಂದಿಗೇ ಡಾ. ಶಿವಪ್ಪ ಮತ್ತು ಅವರ 'ಅರಿವು ಭಾರತ ತಂಡದ ಸಮಸ್ತ ಗೆಳೆಯರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸಮಾಜ ಸುಧಾರಣೆ ಏಕಾಂಗಿ ಹೋರಾಟವಲ್ಲ , ಅದು ಸಾಮೂಹಿಕ ಜವಾಬ್ದಾರಿ ಎಂಬ ಪಾರಂಪರಿಕ ಔದಾತ್ಯವನ್ನು ಗಮನದಲ್ಲಿಟ್ಟುಕೊಂಡು,

'ಅರಿವು ಭಾರತ' ನಿಜಾರ್ಥದಲ್ಲಿ ಭಾರತವನ್ನು ವ್ಯಾಪಿಸುವ ಹಾರೈಕೆಯೊಂದಿಗೆ ಈ ಬರಹಕ್ಕೆ ವಿರಾಮ ನೀಡುತ್ತೇನೆ.

ಅಂತರಂಗ

# ದಿನದ ಸುಭಾಷಿತಗಳಲ್ಲಿ ಕೆಲವು.....



ಎಚ್. ಕೆ. ವಿವೇಕಾನಂದ

ಪತ್ರಿಕೆಯಲ್ಲಿ ಪ್ರಕಟವಾಗಿರುವ ಕೆಲವು ಸುಭಾಷಿತಗಳನ್ನು ಓದುತ್ತಿರುವಾಗ ಈ ಕ್ಷಣಕ್ಕೂ ಈ ದಾರ್ಶನಿಕರ ಮಾತುಗಳು ಎಷ್ಟು ವಾಸ್ತವವಾದದ್ದು ಮತ್ತು ಪ್ರಸ್ತುತವಾದದ್ದು ಎಂದೆನಿಸಿತು....

ವಸ್ತು ಸಂಸ್ಕೃತಿಯ, ಆಧುನಿಕ ತಂತ್ರಜ್ಞಾನದ ಈ ಕಾಲಘಟ್ಟದಲ್ಲಿ ಬದುಕುತ್ತಿರುವ ನಾವು, ಧ್ಯಾನಸ್ಥ ಮನಸ್ಥಿತಿಯನ್ನು ಕಳೆದುಕೊಂಡಿರುವ ನಾವು, ಕನಿಷ್ಠ ಸಾಮಾನ್ಯ ಜ್ಞಾನವನ್ನು ಉಳಿಸಿಕೊಳ್ಳುವಲ್ಲಿ ವಿಫಲರಾಗಿದ್ದೇವೆ. ಅದರ ಪರಿಣಾಮವೇ ಮನಸ್ಸಿನ ನಿರ್ವಾತ ಸ್ಥಿತಿ.

ಸಕಲ ಜೀವರಾಶಿಗಳಲ್ಲಿ ಅತ್ಯಂತ ಬುದ್ಧಿವಂತ ಪ್ರಾಣಿ ಎಂದರೆ ಮನುಷ್ಯ. ಎಲ್ಲಾ ಜೀವಿಗಳಲ್ಲಿ ನಾಗರಿಕತೆಯನ್ನು ಅಳವಡಿಸಿಕೊಂಡಿರುವ ಸಮಾಜ ಮನುಷ್ಯರದು. ಜಗತ್ತಿನ ಬಹುತೇಕ ಪ್ರಾಕೃತಿಕ ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದಿ, ಅದನ್ನು ತನ್ನ ಅನುಕೂಲಕ್ಕೆ ಬಳಸಿಕೊಂಡು ಅನುಭವಿಸುತ್ತಿರುವವನು ಮನುಷ್ಯನೇ.

ತನ್ನ ಮನಸ್ಸಿನ ಭಾವನೆಗಳನ್ನು ಸ್ವಚ್ಛಂದವಾಗಿ, ಸ್ವೇಚ್ಛೆಯಾಗಿ ಹೊರಹೊಮ್ಮಿಸುತ್ತ, ಅದರಲ್ಲಿ ತೇಲಾಡಿ, ಅತ್ಯಂತ ಸುಖ ಲೋಲುಪತೆಯಲ್ಲಿ ತೇಲುತ್ತಿರುವುದು ಮನುಷ್ಯನೇ.

“ಕಲ್ಲು ಇಟ್ಟಿಗೆಗಳಿಂದ ಕಟ್ಟಿರುವ ಗುಡಿ ಗೋಪುರಗಳಿಗಿಂತ, ಚರ್ಚು ಮಸೀದಿಗಳಿಗಿಂತ, ಬೌದ್ಧ ಸ್ತೂಪಗಳಿಗಿಂತ, ಜೈನ ಬಸದಿಗಳಿಗಿಂತ, ಸಿಖ್ ಗುರುದ್ವಾರಗಳಿಗಿಂತ, ಲಿಂಗಾಯತ ಮಠಗಳಿಗಿಂತ ನೆತ್ತರು, ಮಾಂಸದಿಂದ ನಿರ್ಮಾಣವಾಗಿರುವ ಮಾನವನ ಶರೀರವೇ ನಿಜವಾದ ದೇವಾಲಯ.....”

**- ಮಹಾತ್ಮ ಗಾಂಧಿ.**

( ಅವರ ಸಣ್ಣ ಹೇಳಿಕೆಯ ಪರಿಕಲ್ಪನೆಯನ್ನು ಎಲ್ಲಾ ಧರ್ಮಗಳಿಗೂ ಅನ್ವಯಿಸಿ ವಿಸ್ತರಿಸಲಾಗಿದೆ........)

“ನಂಬಿ ಅನುಭವಿಸುವುದಕ್ಕಿಂತ ಅನುಭವಿಸಿ ನಂಬುವುದೇ ಶಾಶ್ವತ ಮತ್ತು ಸತ್ಯ. ಕುರುಡು ನಂಬಿಕೆಯ ಮೇಲೆ ನಿಂತ ಅನುಭವವೂ ಕುರುಡಾದುದೆ.....”

**- ಕುವೆಂಪು.**

“ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮಣ್ಣುಗಳ ಗುಡಿಯೊಳಗೆ, ಇಲ್ಲೇ ಇರುವ ಪ್ರೀತಿ ಸ್ನೇಹಗಳ ಗುರುತಿಸದಾದೆನು ನಮ್ಮೊಳಗೆ....”

**- ಜಿ. ಎಸ್. ಶಿವರುದ್ರಪ್ಪ.**

ಕುಳಿತಲ್ಲಿ, ನಿಂತಲ್ಲಿ, ನಡೆದಾಡಿದಲ್ಲಿ, ಮಲಗಿದ್ದಲ್ಲಿ ನಮಗೇನು ಬೇಕೋ, ಎಲ್ಲಾ ಅನುಕೂಲಗಳನ್ನು ನಮ್ಮ ಬಳಿಯೇ ಬರುವಂತೆ ಮಾಡಿಕೊಂಡು ಸುಖದ ಸುಪ್ಪತ್ತಿಗೆಯಲ್ಲಿ ಬದುಕುತ್ತಿರುವವರು ಮನುಷ್ಯರೇ.

**ವಿಪರ್ಯಾಸವೆಂದರೆ,** ಇದೇ ಮನುಷ್ಯ ಎಲ್ಲ ಜೀವರಾಶಿಗಳಿಗಿಂತ ಹೆಚ್ಚಾಗಿ ತನ್ನನ್ನು ತಾನೇ ಅಳಿದುಕೊಂಡು, ತನ್ನನ್ನು ತಾನೇ ಟೀಕಿಸಿಕೊಂಡು, ತನ್ನನ್ನು ತಾನೇ ನಂಬದೇ, ಅತ್ಯಂತ ಅಜ್ಞಾನದಿಂದ, ತನ್ನನ್ನು ತಾನೇ ನಿಕೃಷ್ಟವಾಗಿ ಭಾವಿಸಿ, ನಿರಾಶೆಯ, ವಿನಾಶದ, ಅಸಹಾಯಕ ಪರಿಸ್ಥಿತಿಗೆ ನೂಕಲ್ಪಡುತ್ತಿರುವವನು ಇದೇ ಮಾನವನೇ.

ಯಾವುದು ಮುಖ್ಯ, ಯಾವುದು ಅಮುಖ್ಯ, ಯಾವುದು ಅಭಿವೃದ್ಧಿ, ಯಾವುದು ವಿನಾಶ ಎಂಬುದನ್ನು ಅರಿಯದೆ ತಾನೇ ಹಣೆದ ಬಲೆಯೊಳಗೆ ಸಿಲುಕಿ ಒದ್ದಾಡುತ್ತಿರುವವನು ಇದೇ ಜೀವಿಯೇ.

ದೇವರು ಧರ್ಮವನ್ನು ಸೃಷ್ಟಿಸಿಕೊಂಡು, ಅದನ್ನೇ ನಂಬಿಕೊಂಡು, ಕೊನೆಗೆ ಆ ನಂಬಿಕೆಯಿಂದಲೇ ಒಬ್ಬರಿಗೊಬ್ಬರು ತಿವಿದುಕೊಂಡು, ತಮ್ಮನ್ನು ತಾವೇ ಕೊಂದುಕೊಳ್ಳುತ್ತಿರುವ ವಿಚಿತ್ರ ಪರಿಸ್ಥಿತಿಗೆ ಬಂದಿರುವುದು ಇದೇ ಮಾನವರು.

ತಮ್ಮೊಳಗಡಗಿರುವ ಅದ್ಭುತ ಮಾನವೀಯತೆಯನ್ನು, ವಿವೇಚನಾ ಶಕ್ತಿಯನ್ನು, ವಿಶೇಷ ಸಾಮರ್ಥ್ಯವನ್ನು ಗುರುತಿಸದೆ ಕೇವಲ ಮನೆ, ಕಾರು, ಬಂಗಲೇ, ಅಧಿಕಾರ, ಪ್ರಶಸ್ತಿ, ಜನಪ್ರಿಯತೆ ಇವುಗಳನ್ನೇ ಯಶಸ್ಸಿನ ಮಾನದಂಡವೆಂದು, ಬದುಕಿನ ಪರಮೋಚ್ಚ ಸಾಧನೆ ಎಂದು ಭ್ರಮಿಸಿ, ಅದನ್ನು ಪಡೆದ ನಂತರವೂ, ಇದೀಗ ತನ್ನೊಳಗೆ ಅಸಹನೆ, ಅತೃಪ್ತಿ, ಅಸಹಿಷ್ಣುತೆ, ಅಸಮಾಧಾನದಿಂದ ನರಳುತ್ತಿರುವವನು ಇದೇ ಮನುಷ್ಯ.

ಎಲ್ಲಿ ನೋಡಿದರಲ್ಲಿ ಹಿಂಸೆ, ಅಪಘಾತ, ಬೆಂಕಿ, ಆತ್ಮಹತ್ಯೆ, ಕೊಲೆ, ಅತ್ಯಾಚಾರ, ಅಪರಾಧ, ಪ್ರತಿಭಟನೆ, ಮುಷ್ಕರ, ಅನಾರೋಗ್ಯ, ಮೋಸ, ವಂಚನೆ, ಕಳ್ಳತನ ಇವುಗಳ ನಡುವೆ ಕಳೆದು ಹೋಗುತ್ತಾ, ನಿಜವಾದ ಜೀವನ ಮೌಲ್ಯವನ್ನೇ ಕಳೆದುಕೊಂಡು ವಿಷಾದದಿಂದ ಆಕಾಶ ನೋಡುತ್ತಿರುವುದು ಇದೇ ಮನುಷ್ಯನೇ.

ಇನ್ನಾದರೂ ತಾಳ್ಮೆಯಿಂದ, ಸರಳತೆಯಿಂದ, ಸಹಜತೆಯಿಂದ, ಒಂದಷ್ಟು ವಿವೇಚನೆ, ವಿವೇಕ, ಬುದ್ದಿವಂತಿಕೆ ಬೆಳೆಸಿಕೊಂಡು, ಪ್ರಕೃತಿಯೊಡನೆ ಒಡನಾಡುತ್ತಾ ಧ್ಯಾನಸ್ತ ಮನಸ್ಥಿತಿಗೆ ಬನ್ನಿ. ಅದೊಂದು ಅದ್ಭುತ ಲೋಕ. ಎಲ್ಲಾ ಕುಟುಂಬ, ಸಮಾಜ, ವಾಸ್ತವದ ವ್ಯಾವಹಾರಿಕ ಬದುಕಿನ ನಡುವೆಯೂ, ಧ್ಯಾನಸ್ಥ ಮನಸ್ಥಿತಿ ನಿರ್ಮಿಸಿಕೊಳ್ಳುವ ಶಕ್ತಿ, ಸಾಮರ್ಥ್ಯ, ಮನಸ್ಥಿತಿ ನಿಮ್ಮಲಡಗಿದೆ. ಅದಕ್ಕೊಂದು ರೂಪ ನೀಡಿ ಪ್ರಯತ್ನಿಸಿ. ಆ ದಿವ್ಯಶಕ್ತಿ ನಿಮ್ಮದಾದರೆ ನಿಮ್ಮ ಬದುಕು ಇಂತಹ ಪರಿಸ್ಥಿತಿಯಲ್ಲಿಯೂ ಸಹನೀಯವಾಗುವುದು, ಸಂತೋಷವಾಗುವುದು ಆರಾಮದಾಯಕವಾಗುವುದು. ದಯವಿಟ್ಟು ಪ್ರಯತ್ನಿಸಿ.......

ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ,

ಜನರ ಜೀವನಮಟ್ಟ ಸುಧಾರಣೆಯ ಗುರಿಯೊಂದಿಗೆ,

ಮನಗಳಲ್ಲಿ - ಮನೆಗಳಲ್ಲಿ - ಮತಗಳಲ್ಲಿ - ಪರಿವರ್ತನೆಗಾಗಿ,

*ಮನಸ್ಸುಗಳ ಅಂತರಂಗದ ಚಳವಳಿ,*
*ವಿವೇಕಾನಂದ. ಎಚ್. ಕೆ.*
*9663750451.......*
*9844013068.......*



ಡಾ. ಶಿವಪ್ಪ ಅರಿವು

# ಅಸ್ಪೃಶ್ಯತೆ ಉಳಿದಿರುವುದಾದರೂ ಹೇಗೆ?

ಒಂದು ತಪ್ಪನ್ನು ತಿದ್ದುಕೊಳ್ಳಲು ಎಷ್ಟು ವರ್ಷ ಬೇಕು? ಎನ್ನುವ ಪ್ರಶ್ನೆಯೊಂದಿಗೆ ಅಸ್ಪೃಶ್ಯತೆ ಉಳಿದಿರುವುದಾದರೂ ಹೇಗೆ ಎನ್ನುವುದನ್ನು ಸಣ್ಣದಾಗಿ ಚರ್ಚಿಸೋಣ.

ನಮ್ಮ ಸುತ್ತಮುತ್ತ, ರಾಜ್ಯ ಮತ್ತು ರಾಷ್ಟ್ರವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅಸ್ಪೃಶ್ಯತೆಯನ್ನು ಹೋಗಲಾಡಿಸಬಿಡಬೇಕು ಎಂದು ತೀವ್ರವಾಗಿ ಕೆಲಸಮಾಡುತ್ತಿರುವ ನಾಲ್ಕು ಹೆಸರುಗಳು ನಮಗೆ ಸಿಕ್ಕಿಲ್ಲ. ಪ್ರತಿದಿನ ಹೊಸಹೊಸ ದಾರಿಗಳನ್ನು ಹಿಡಿದು ಅಸ್ಪೃಶ್ಯತೆಯನ್ನು ಸಡಿಲಿಸಲು ಪ್ರಯತ್ನಿಸಿದ್ದರೆ ಅಸ್ಪೃಶ್ಯತೆ ಉಳಿದಿರಲು ಸಾಧ್ಯವೆ?

ಯಾವ ಹಳ್ಳಿಗೆ ಹೋದರೂ ದಲಿತರು ಹೇಳುವುದು ನಮ್ಮನ್ನು ಮೇಲ್ಜಾತಿಯವರು ಮನೆಯೊಳಗೆ ಕರೆಯಲ್ಲ, ದೇವಾಲಯಕ್ಕೆ ಬಿಡಲ್ಲ ಎಂದು. ಈ ಮಾತನ್ನು ನಾನು ಬೇರೆ ಕಡೆ ಹೇಳಿದಾಗ ಕೆಲವರು, ಅದರಲ್ಲೂ ನಗರಗಳಲ್ಲಿ ನೆಲೆಸಿರುವ ನಾಯಕರು 'ಎಲ್ಲಿ ಬಿಡಲ್ಲ ಹೇಳಿ?' ಎಂಬ ವಿಚಿತ್ರ ಪ್ರಶ್ನೆ ಕೇಳುತ್ತಾರೆ. ಆ ಪ್ರಶ್ನೆಯೇ ಅವರ ಅಜ್ಞಾನವನ್ನು ತೋರಿಸುವುದರಿಂದ 'ನನ್ನ ಜೊತೆ ಬನ್ನಿ' ಎಂದಷ್ಟೇ ಹೇಳಿ ಸುಮ್ಮನಾಗುತ್ತೇನೆ. ಅವರು ನಗರ ಬಿಟ್ಟು ಬರುವುದಿಲ್ಲ. ಅವರಿಗೆ ಅಸ್ಪೃಶ್ಯತೆ ವಸ್ತು ಸ್ಥಿತಿ ಅರ್ಥವೂ ಆಗುವುದಿಲ್ಲ. ಎಲ್ಲಾ ವೇಗವಾಗಿ ಬದಲಾಗಿಬಿಟ್ಟಿದೆ ಎಂಬ ಭ್ರಮಾ ಲೋಕದಲ್ಲಿದ್ದಾರೆ.

ಅಧಿಕಾರಿಗಳ ಜೊತೆಗೂ ಕೆಲಸ ಮಾಡುತ್ತಿದ್ದೇವೆ. ಅವರಲ್ಲಿ ಬಹುತೇಕರಿಗೆ ಅಸ್ಪೃಶ್ಯತೆಯು ದೊಡ್ಡ ಸಮಸ್ಯೆ ಅನಿಸಿಲ್ಲ. ಗ್ರಾಮ ಪಂಚಾಯಿತಿ ಅಧಿಕಾರಿಗಳಿಂದ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಅಧಿಕಾರಿಗಳ ವರೆಗೆ ಅಸ್ಪೃಶ್ಯತೆ ನಿರ್ಮೂಲನೆ ಆದ್ಯತೆಯಾಗಿ ಕಂಡಿಲ್ಲ. ಕಂಡಿದ್ದರೆ ಸ್ವಾತಂತ್ರ್ಯದ ನಂತರವೂ ಇದು ಉಳಿಯುತ್ತಿರಲಿಲ್ಲ. ಒಂದಂತು ಸ್ಪಷ್ಟ, ಅಸ್ಪೃಶ್ಯತೆ ಹೋಗಲೇ ಬೇಕು, ಅದು ಈಗಲೇ ಹೋಗಬೇಕು ಎನ್ನುವ ತುರ್ತು ಯಾರಿಗೂ ಇಲ್ಲ. ದಲಿತರು ರಾಜಕೀಯವಾಗಿ ದೊಡ್ಡ ಗುಂಪಾಗಿದ್ದರೂ ಸಮಾಜಿಕವಾಗಿ ಒಂದುಗೂಡಲು ಸಾಧ್ಯವಾಗಿಲ್ಲ. ಬದಲಾವಣೆಗಳು ಬರುತ್ತಿವೆಯಾದರೂ ಆಮೆ ಗತಿಯಲ್ಲಿರುವುದರಿಂದ ನಮ್ಮ ಜೀವಿತಕಾಲದಲ್ಲಿ ಸಮಸಮಾಜ ನೋಡಲು ಆಗದು. ಹಾಗಾಗಿಯೇ ಆ ಪ್ರಕ್ರಿಯೆಯನ್ನು ತೀವ್ರಗೊಳಿಸಬೇಕೆಂದು ಒತ್ತಾಸೆ, ನಮ್ಮದು.

ಅಸ್ಪೃಶ್ಯತೆಯನ್ನು ಯಾರು ಹುಟ್ಟುಹಾಕಿದರೂ ಅವರೆ ಅದರ ಪೋಷಕರೂ ಆಗಿದ್ದಾರೆ. ಹಾಗಂತ ಎಲ್ಲದಕ್ಕೂ ಕೆಲವೇ ಜಾತಿಗಳನ್ನು ಬೊಟ್ಟುಮಾಡಿ ತೋರಿಸುವುದರಿಂದ ಪ್ರಯೋಜನವೂ ಇಲ್ಲ. ನೂರಾರು ಊರುಗಳನ್ನು ನಾನು ಸುತ್ತಿದ್ದೇನೆ. ಅನೇಕ ಊರುಗಳಲ್ಲಿ ಶೂದ್ರರೇ ಆಗಿರುವ ಲಿಂಗಾಯತ, ಕುರುಬ, ಒಕ್ಕಲಿಗ, ನಾಯಕ ಮೊದಲಾದ ಸಮುದಾಯದ ಜನರೇ ಬಲಿಷ್ಠವಾಗಿದ್ದು ಅಸ್ಪೃಶ್ಯತೆಯನ್ನು ಕಾಪಾಡಿಕೊಂಡು ಬರುತ್ತಿದ್ದಾರೆ.

ಚಾರಿತ್ರಿಕವಾಗಿ ಶತಮಾನಗಳ ಕಾಲ ಮೇಲು-ಕೀಳು ಭಾವನೆ ಬೇರೂರಿ ತಕ್ಷಣ ಸಮಪಾತಳಿಗೆ ಬರಲು ಆಗುತ್ತಿಲ್ಲ ಎಂಬ ಮಾತು ಒಪ್ಪುವಂತಹುದಲ್ಲ. ಈಗಿನ ಬಹುತೇಕರು ಹಾಗೂ ಬಲಿಷ್ಠರು ಆಗಿರುವ ರಾಜಕಾರಣಿಗಳು, ಅಧಿಕಾರಿಗಳು ಮೇಲ್ಜಾತಿಯವರೇ ಆಗಿರುವುದರಿಂದ ತಾರತಮ್ಯ ನಿಷೇಧ ಕಾಯಿದೆಗಳನ್ನು ಸರಿಯಾಗಿ ಜಾರಿಗೊಳಿಸಿಯೇ ಇಲ್ಲ. ದೇವಾಲಯ ಪ್ರವೇಶಕ್ಕೆ ಕಾಯಿದೆ ಮಾಡಿ ಎಂಟು ದಶಕಗಳಾಗಿದ್ದರೂ ಪ್ರವೇಶ ಏಕೆ

ಸಾಧ್ಯವಾಗಿಲ್ಲ ಎಂಬ ಪ್ರಶ್ನೆಗೆ ಪ್ರತ್ಯೇಕ ಉತ್ತರ ಬೇಕಿಲ್ಲ. ಅಸ್ಪೃಶ್ಯತೆಯ ಅವಮಾನ ಎಷ್ಟು ಭಯಾನಕ ಎಂಬುದು ಮೇಲ್ಜಾತಿ ಅಧಿಕಾರಗಳಿಗೆ ಗೊತ್ತಿಲ್ಲವಲ್ಲ! ನಾವೇ ಹಲವು ಮಂದಿ ತಹಶೀಲ್ದಾರರಿಗೆ 'ದಲಿತರಿಗೆ ಸಾರ್ವಜನಿಕ ಗುಡಿಗಳಿಗೆ ಪ್ರವೇಶವಿಲ್ಲ' ಎಂದು ಹೇಳಿದಾಗ, 'ಈ ಕಾಲದಲ್ಲಿ ಎಲ್ಲಿದೆ?, ಎಂದು ಜಾಣಕುರುಡು ಪ್ರದರ್ಶಿಸುತ್ತಾರೆ. ಸ್ಪಷ್ಟವಾಗಿ ಹಳ್ಳಿ ಹೆಸರು ಕೊಟ್ಟರೂ ತಿಪ್ಪೆ ಸಾರಿಸುವ ಹಾಗೆ ಉತ್ತರ ಕೊಟ್ಟು ಜಾರಿಕೊಳ್ಳುತ್ತಾರೆ. ಆದರೂ ನಾವು ಅವರ ಬೆನ್ನುಹತ್ತಿ ಹಲವು ಕೆಲಸಗಳನ್ನು ಮಾಡಿಸಿದ್ದೇವೆ. ದೇವಾಲಯಗಳ ಮುಂದೆ ' ಈ ದೇವಾಲಯದಲ್ಲಿ ಎಲ್ಲರಿಗೂ ಪ್ರವೇಶವಿದೆ' ಎಂಬ ಬೋರ್ಡು ಹಾಕಿಸುವಲ್ಲಿ ಯಶಸ್ವಿಯಾಗಿದ್ದೇವೆ. ಇಷ್ಟಕ್ಕೆ ಕೆಲಸ ಮುಗಿಯಲ್ಲ. ನಿರಂತರವಾಗಿ ಹಳ್ಳಿಗಳಿಗೆ ಹೋಗಿ ಜನಸಭೆಗಳನ್ನು ಮಾಡಿ ಅರಿವು ಮೂಡಿಸಿದರೆ ಖಂಡಿತ ಬದಲಾವಣೆಗಳು ತ್ವರಿತವಾಗಿ ಬರುತ್ತವೆ. ಆ ಕೆಲಸ ಮಾಡುವ ಅಧಿಕಾರಿಗಳು ಎಷ್ಟು ಜನ ಇದ್ದಾರೆ ಹೇಳಿ?

ಶಿಕ್ಷಣ ಸಿಕ್ಕಿದರೆ ಸರಿಹೋಗುತ್ತದೆ ಎನ್ನವವರಿಗೆ ಒಂದೆರಡು ಉದಾಹರಣೆ ಕೊಡಬಯಸುತ್ತೇನೆ. ಒಂದು ಹಳ್ಳಿಯಲ್ಲಿ ಪದವಿಪಡೆದು ಉನ್ನತ ಕೆಲಸಗಳನ್ನು ಸೇರಿಕೊಂಡಿರುವವರು ಐವತ್ತಕ್ಕೂ ಹೆಚ್ಚು ಮಂದಿ ಇದ್ದಾರೆ. ಅಂದರೆ 30 ರಿಂದ 40 ಮನೆಗಳಲ್ಲಿ ವಿದ್ಯಾವಂತರಿದ್ದಾರೆ. ಅಸ್ಪೃಶ್ಯತೆ ನಿರ್ಮೂಲನೆ ವಿಷಯದಲ್ಲಿ ಆ ಊರಲ್ಲೂ ಹೇಳಿಕೊಳ್ಳುವ ಬದಲಾವಣೆ ಕಾಣಲಿಲ್ಲ. ಮೇಲ್ವರ್ಗದ ಉಪನ್ಯಾಸಕರು, ಲಾಯರುಗಳು, ರಾಜಕಾರಣಿಗಳು ಕೂಡ ಈ ವಿಷಯದಲ್ಲಿ ಜಾರಿಕೊಳ್ಳುವುದೇ ಹೆಚ್ಚು. ಏಕೆ? ಏಕೆಂದರೆ ಅನೇಕರಲ್ಲಿ ದ್ವೇಷ ಕರಗಿಲ್ಲ. ಪ್ರೀತಿ ಇನ್ನೂ ಹುಟ್ಟಿಲ್ಲ.

ಇಂದು ಸಿಗುತ್ತಿರುವ ಶಿಕ್ಷಣ ಉದ್ಯೋಗ ಕೇಂದ್ರಿತವಾದದ್ದು ಮತ್ತು ಪೈಪೋಟಿಗಿಳಿದು ಹೆಚ್ಚು ಗಳಿಸುವ ತಂತ್ರಗಳನ್ನು ಹೇಳಿಕೊಡುವಂತಹದ್ದು. ಹಂಚಿಕೊಂಡು ತಿನ್ನುವ, ಹೆಚ್ಚುವರಿಯಾದುದನ್ನು ಬಿಟ್ಟುಕೊಡುವ, ಬಲಹೀನರ ಪರ ಮಿಡಿಯುವ, ಸಹಚರರೊಂದಿಗೆ ಅನ್ಯೋನ್ಯವಾಗಿ ಬದುಕುವ ವಿಚಾರಗಳಿಗೆ ಒತ್ತುಕೊಡುತ್ತಿಲ್ಲ. ಪೈಪೋಟಿಗಿಳಿದವರು ತಮ್ಮ ಓಟದ ಬಗ್ಗೆ ಚಿಂತಿಸುವರೇ ಹೊರತು, ಹಿಂದೆ ಉಳಿದವರ ಬಗ್ಗೆ ಪ್ರೀತಿ, ಸಹಾನುಭೂತಿಗಳನ್ನೇನೂ ಹೆಚ್ಚು ಇಟ್ಟುಕೊಳ್ಳುವುದಿಲ್ಲ. ಹಾಗಾಗಿ ಇತ್ತೀಚೆಗೆ, ಅದರಲ್ಲೂ ಖಾಸಗಿ ಆಂಗ್ಲ ಶಾಲೆಗಳಲ್ಲಿ ಓದುತ್ತಿರುವವರು ಒಂದು ರೀತಿ UPROOTED ಹಾಗೆ ಕಾಣುತ್ತಿದ್ದಾರೆ. ಅವರಿಗೆ ಮೌಲ್ಯಾಧಾರಿತ ಶಿಕ್ಷಣ ಸಿಗುತ್ತಿಲ್ಲ. ಅವರಿಂದ ಅಸ್ಪೃಶ್ಯತೆ ನಿವಾರಣೆ ಬಯಸುವುದಾದರೂ ಹೇಗೆ?

ಇವು ಯಾವುದೂ ನಿರಾಸೆಯ ನುಡಿಗಳಲ್ಲ. ವಾಸ್ತವಗಳು. ಹಾಗಾದರೆ ಅಸ್ಪೃಶ್ಯತೆಗೆ ಮದ್ದು ಇಲ್ಲವೆ ಎಂದು ನೀವು ಕೇಳಬಹುದು. ಎಲ್ಲ ಸಮಸ್ಯೆಗಳಿಗೂ ಪರಿಹಾರವಿದೆ. ಅಸ್ಪೃಶ್ಯತೆಗೂ ಇದೆ. ತುಂಬಾ ಶ್ರದ್ಧೆಯಿಂದ ಈ ಕಾಲಕ್ಕೆ ಬೇಕಾದ ಪರಿಹಾರ ದಾರಿಗಳನ್ನು ಹುಡುಕಬೇಕಿದೆ.

ನಾವು ಕಳೆದ ಹನ್ನೆರಡು ವರ್ಷಗಳಿಂದ ಅಸ್ಪೃಶ್ಯತೆ ನಿರ್ಮೂಲನೆಯ ಬಗ್ಗೆ ಯೋಚಿಸುತ್ತಿರುವುದು, ಕಾರ್ಯಕ್ರಮ ರೂಪಿಸುತ್ತಿರುವುದನ್ನು ನೀವೂ ಗಮನಿಸಿರಬಹುದು. ಬಾಬಾ ಸಾಹೇಬರಾದಿಯಾಗಿ ಅನೇಕರು ತೋರಿರುವ ಪರಿಹಾರೋಪಾಯಗಳನ್ನೂ ಇಟ್ಟುಕೊಂಡು, ಹೊಸ ದಾರಿಗಳನ್ನು ಹುಡುಕುತ್ತಿದ್ದೇವೆ. ಹಳ್ಳಿಗಳ ಮೇಲ್ಜಾತಿ ಉದಾರಿಗಳನ್ನು ಮುಂದಿಟ್ಟುಕೊಂಡು ಬದಲಾವಣೆಯ ಬಾಗಿಲುಗಳನ್ನು ತೆರೆಸುತ್ತಿದ್ದೇವೆ. ತಕ್ಕಮಟ್ಟಿಗೆ ತಿಳುವಳಿಕೆ ಪಡೆದುಕೊಂಡಿರುವ ರೈತ ಸಂಘ, ದಲಿತ ಸಂಘಟನೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಪತ್ರಕರ್ತರ ಸಂಘ, ನೌಕರರ ಸಂಘ .... ಹೀಗೆ ಅನೇಕ ಸಂಘಸಂಸ್ಥೆಗಳನ್ನೂ ಜೊತೆಗೂಡಿಸಿಕೊಂಡಿದ್ದೇವೆ. ಅಧಿಕಾರಿಗಳು ಅಸ್ಪೃಶ್ಯತೆ ನಿರ್ಮೂಲನೆಯನ್ನೂ ತಮ್ಮ ಆದ್ಯತೆಯನ್ನಾಗಿಸಿಕೊಳ್ಳಬೇಕು ಎಂದು ಮನವರಿಕೆ ಮಾಡಿಕೊಡುತ್ತಿದ್ದೇವೆ. ಕೋಲಾರದ ಅನೇಕ ಮಂದಿ ಜಿಲ್ಲಾಧಿಕಾರಿಗಳು ಅರಿವು ಮೂಡಿಸುವ ಕೆಲಸಗಳಿಗೆ ತುಂಬಾ ಸಮಯವನ್ನು ಕೊಟ್ಟಿದ್ದಾರೆ. ಬೇರೆ ಜಿಲ್ಲೆಗಳಲ್ಲೂ ಈ ಬಗೆಯ ಜಾಗೃತಿ ಕೆಲಸಗಳಾಗಬೇಕು.

# ಸಮಾಜದ ಮತಿಭ್ರಮಣೆ ಮತ್ತು ಅಸಮಾನತೆಯ ಕಂದಕದಿಂದ ಪಾರಾಗಲು ಒಂದು ಆತ್ಮಸಾಕ್ಷಿ ಅಭಿಯಾನ ಅವಶ್ಯವಿದೆ



ಡಾ. ಎಂ. ಆರ್. ರವಿ
ಜಿಲ್ಲಾಧಿಕಾರಿಗಳು ಕೋಲಾರ

ಇಂದಿನ ಆಧುನಿಕ ಯುಗದಲ್ಲಿಯೂ ಜಾತಿ, ಅಸಮಾನತೆ ಮತ್ತು ಅಸ್ಪೃಶ್ಯತೆಯಂತಹ ಸಾಮಾಜಿಕ ಪಿಡುಗುಗಳ ಕುರಿತು ಚರ್ಚಿಸಬೇಕಾದದ್ದು ನಮ್ಮ ಸಮಾಜದ ದೊಡ್ಡ ವಿರೋಧಭಾಸವಾಗಿದೆ. ನಾವು ಆಡುವ ಮಾತು ಮತ್ತು ನಮ್ಮ ನಡವಳಿಕೆಗಳ ನಡುವೆ ಅಜಗಜಾಂತರ ವ್ಯತ್ಯಾಸವಿದೆ. ನಮ್ಮ ಭಾಷೆಯು ಮುತ್ತಿನಂತಹ ಸುಂದರ ವಿಚಾರಗಳನ್ನು ಹೊಂದಿದ್ದರೂ, ಆಚರಣೆಯಲ್ಲಿ ಮಾತ್ರ ಮಾನವೀಯ ಮೌಲ್ಯಗಳು ಜಾತಿ, ಸಂಪ್ರದಾಯ ಮತ್ತು ಶ್ರೇಷ್ಠತೆಯ ಅಹಂಕಾರದಡಿ ಕಮರಿ ಹೋಗುತ್ತಿವೆ.

ಧರ್ಮದ ಅಡುಗೆಮನೆ ಮತ್ತು ವಿವೇಕಾನಂದರ ಎಚ್ಚರಿಕೆ

ಸ್ವಾಮಿ ವಿವೇಕಾನಂದರು ಅಂದು ಭಾರತೀಯ ಧಾರ್ಮಿಕ ಆಚರಣೆಗಳಲ್ಲಿ ಇದ್ದ ಲೋಪದೋಷಗಳನ್ನು ಅತ್ಯಂತ ಕಟುವಾಗಿ ಟೀಕಿಸಿದ್ದರು. ಅವರ ಪ್ರಸಿದ್ಧ ಮಾತು, “OUR RELIGION IS IN THE KITCHEN” (ನಮ್ಮ ಧರ್ಮ ಅಡುಗೆ ಕೋಣೆಯನ್ನು ಸೇರಿದೆ) ಎಂಬುದು ಇಂದಿಗೂ ಎಷ್ಟು ಪ್ರಸ್ತುತವಾಗಿದೆ ಎಂದು ನಾವು ಯೋಚಿಸಬೇಕು. ನಾವು ವೇದಾಂತಿಗಳಲ್ಲ, ಪುರಾಣಿಕರಲ್ಲ, ತಾಂತ್ರಿಕರಲ್ಲ; ಬದಲಾಗಿ ನಾವೆಲ್ಲರೂ “DON’T TOUCH ME” (ನನ್ನನ್ನು ಮುಟ್ಟಬೇಡಿ) ಎಂಬ ಸಂಕುಚಿತ ಮನಸ್ಥಿತಿಯ ‘ಅಸ್ಪೃಶ್ಯತಾ ಪಾಲಕರು’ ಮಾತ್ರ ಆಗಿದ್ದೇವೆ.

ದೇವರು ಎಲ್ಲಿಯೋ ದೂರದಲ್ಲಿ ಇಲ್ಲ, ಅದು ಅಡುಗೆ ಮನೆಯ ಪಾತ್ರೆಗಳಲ್ಲಿ ಮತ್ತು ನಾವು ಪಾಲಿಸುವ ಕಟ್ಟುಪಾಡುಗಳಲ್ಲಿ ಮಾತ್ರ ಬಂಧಿಯಾಗಿದೆ. ವಿವೇಕಾನಂದರು ಎಚ್ಚರಿಸಿದಂತೆ, ಈ ಧೋರಣೆ ಹೀಗೆಯೇ ಮುಂದುವರಿದರೆ, ಇನ್ನೊಂದು ಶತಮಾನದ ಅವಧಿಯಲ್ಲಿ ಇಡೀ ಸಮಾಜವು ಒಂದು ಬೃಹತ್ ಉನ್ಮಾದದ ಆಸ್ಪತ್ರೆಯಾಗಿ (LUNATIC ASYLUM) ಪರಿವರ್ತನೆಯಾಗಲಿದೆ. ಮಾನವೀಯತೆಯನ್ನು ಕಳೆದುಕೊಂಡ ಯಾವುದೇ ಸಮಾಜವು ಸುಸ್ಥಿರವಾಗಿರಲು ಸಾಧ್ಯವಿಲ್ಲ ಎಂಬುದಕ್ಕೆ ನಮ್ಮ ಇಂದಿನ ಕಂದಕಗಳೇ ಸಾಕ್ಷಿ.

ಶ್ರೇಷ್ಠತೆಯ ವ್ಯಸನ: ಒಂದು ಮಾನಸಿಕ ಅಸ್ವಸ್ಥತೆ

ಸಮಾಜದಲ್ಲಿ ಇಂದು ಬೇರೂರಿರುವ ಅಸಮಾನತೆಗೆ ಪ್ರಮುಖ ಕಾರಣ ‘ಶ್ರೇಷ್ಠತೆಯ ವ್ಯಸನ’ (ADDICTION OF SUPERIORITY). “ನಾನು ಶ್ರೇಷ್ಠ, ನನ್ನ ಜಾತಿ ಶ್ರೇಷ್ಠ, ನನ್ನ ಕುಲದ ಹಿರಿತನವೇ ದೊಡ್ಡದು” ಎಂಬ ಅಹಂಕಾರವು ವ್ಯಕ್ತಿಯಲ್ಲಿ ಒಂದು ರೀತಿಯ ಮತಿಭ್ರಮಣೆಯನ್ನು ಉಂಟುಮಾಡಿದೆ. ಈ ಕಲ್ಪನೆಗಳು ಯಾರಿಗೂ ಸಹಜವಾಗಿ ಬಂದಿದ್ದಲ್ಲ; ಇವು ಕೇವಲ ಸ್ವಾರ್ಥ ಮತ್ತು ಅಧಿಕಾರವನ್ನು ಉಳಿಸಿಕೊಳ್ಳಲು ಕೆಲವರು ಸೃಷ್ಟಿಸಿದ ಕೃತಕ ಮಾನದಂಡಗಳು.

ನಾವು ಯಾವುದರ ಆಧಾರದ ಮೇಲೆ ಶ್ರೇಷ್ಠರು? ಹಣವೇ? ಅಧಿಕಾರವೇ? ಅಥವಾ ಕೇವಲ ಹುಟ್ಟು ಆಧಾರಿತ ಜಾತಿಯೇ? ಯಾವುದೇ ಭೌತಿಕ ಮಾನದಂಡಗಳು ಮನುಷ್ಯನ ಆಂತರಿಕ ಶುದ್ಧತೆಯನ್ನು ಅಳೆಯಲಾರವು. ನಿಜವಾದ ಶುದ್ಧತೆ ಇರುವುದು ಆತ್ಮದಲ್ಲಿ, ಹೃದಯದಲ್ಲಿ ಮತ್ತು

ಮನಸ್ಸಿನಲ್ಲಿ. ಹೊರನೋಟಕ್ಕೆ ಧರಿಸುವ ಬಟ್ಟೆಗಳು ಅಥವಾ ನಿರ್ವಹಿಸುವ ವಿಧಿವಿಧಾನಗಳು ವ್ಯಕ್ತಿಯನ್ನು ಉನ್ನತವಾಗಿಸುವುದಿಲ್ಲ. ಅಂತರಂಗದಲ್ಲಿ ಕಲ್ಮಶವನ್ನು ಇಟ್ಟುಕೊಂಡು ಬಹಿರಂಗವಾಗಿ ಶುದ್ಧತೆಯನ್ನು ಸಾರುವುದು, ನದಿಯ ನೀರಿಗೆ ಹುಣಸೆಹಣ್ಣನ್ನು ಹಾಕಿ ಅದು ಶುದ್ಧ ಎಂದು ನಂಬುವುದರಷ್ಟೇ ವ್ಯರ್ಥ ಕೆಲಸವಾಗಿದೆ.

ಅದೃಶ್ಯ ಶತ್ರು: ಸೈಕಲಾಜಿಕಲ್ ಪ್ರಾಬ್ಲಮ್ ಈ ಸಾಮಾಜಿಕ ಕಾಯಿಲೆಯನ್ನು ವಿಶ್ಲೇಷಿಸುವಾಗ ನಮಗೆ ಕಾಣಸಿಗುವುದು ಇದೊಂದು 'ಸೈಕಲಾಜಿಕಲ್ ಪ್ರಾಬ್ಲಮ್' (ಮಾನಸಿಕ ಸಮಸ್ಯೆ). ಯುದ್ಧದಲ್ಲಿ ಎದುರಿಗಿರುವ ಶತ್ರುವನ್ನು ಗುರುತಿಸಬಹುದು, ಅವನ ಬಲವನ್ನು ಅಳೆದು ತಂತ್ರಗಳನ್ನು ರೂಪಿಸಬಹುದು. ಆದರೆ, ನಮ್ಮ ಸಮಾಜದ ಜಾತಿ ಎಂಬುದು ಇವತ್ತು ಒಂದು 'ಅದೃಶ್ಯ ಶತ್ರು' (INVISIBLE ENEMY) ಆಗಿ ಪರಿಣಮಿಸಿದೆ. ಇದು ಹೊರಗೆ ಕಾಣದಿದ್ದರೂ, ಮನಸ್ಸಿನ ಒಳಗಡೆ ಒಂದು ಗೋಡೆಯನ್ನು ನಿರ್ಮಿಸಿದೆ. ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯನ್ನು ನಂಬಲು ಹಿಂಜರಿಯುವ ಈ ಶಂಕೆ ಇದೆಯಲ್ಲ, ಅದು ಸಮಾಜದ ಬಾಂಧವ್ಯವನ್ನು ಕಿತ್ತು ತಿನ್ನುತ್ತಿದೆ. ಈ ಅದೃಶ್ಯ ಶತ್ರುವಿನ ವಿರುದ್ಧ ಹೋರಾಡಲು ಶಸ್ತ್ರಾಸ್ತ್ರಗಳ ಅಗತ್ಯವಿಲ್ಲ ; ಅದಕ್ಕೆ ಬೇಕಾಗಿರುವುದು ಹೃದಯದ ವೈಶಾಲ್ಯತೆ ಮತ್ತು ವೈಚಾರಿಕತೆಯ ತಿಳುವಳಿಕೆ. ನಾವು ನಿರ್ಮಿಸಿಕೊಂಡಿರುವ ಆ ಗೋಡೆಗಳನ್ನು ಭೇದಿಸಿ, ಅಲ್ಲಿ ಪ್ರೀತಿಯ ಮತ್ತು ನಂಬಿಕೆಯ ಗೋಡೆಯನ್ನು ಕಟ್ಟಬೇಕಾಗಿದೆ ಸಂವಿಧಾನ ಮತ್ತು ಆತ್ಮಸಾಕ್ಷಿಯ ಹೊಣೆಗಾರಿಕೆ ಸಂವಿಧಾನದ ಆಶಯಗಳು ಎಲ್ಲರಿಗೂ ಸಮಾನ ಅವಕಾಶಗಳನ್ನು ನೀಡುತ್ತವೆ. ಆದರೆ, ಪಟ್ಟಭದ್ರ ಹಿತಾಸಕ್ತಿಗಾಗಿ ಮಾಡಿಕೊಂಡ ಈ ಜಾತಿ ಪದ್ಧತಿಯ ವ್ಯವಸ್ಥೆಯು ಕಾನೂನುಬಾಹಿರವಾದುದು ಮಾತ್ರವಲ್ಲ, ಇದು ಸಂವಿಧಾನ ವಿರೋಧಿಯಾದ ಮತ್ತು ಮಾನವವಿರೋಧಿಯಾದ ದೋರಣೆಯಾಗಿದೆ. ನಮಗೆಲ್ಲರಿಗೂ ಇದು ತಪ್ಪು ಎಂದು ಅರಿವಿದ್ದರೂ, ಸಂಪ್ರದಾಯದ ಹೆಸರಿನಲ್ಲಿ ಅದನ್ನು ಮುಂದುವರಿಸುತ್ತಿರುವುದು ಆತ್ಮಸಾಕ್ಷಿಗೆ ಮಾಡಿಕೊಳ್ಳುತ್ತಿರುವ ದ್ರೋಹವಾಗಿದೆ.

ಈ ಅರಿವು ಕೇವಲ ವ್ಯಕ್ತಿಗತವಾಗಿರಬಾರದು. ಇದೊಂದು ಸಾಂಸ್ಥಿಕ ಮತ್ತು ಸಾಮಾಜಿಕ ಆಂದೋಲನವಾಗಬೇಕು. ನಮ್ಮ 'ಅರಿವು ಭಾರತದ ಯಾನ' ಎಂಬುದು ಕೇವಲ ಘೋಷಣೆಯಾಗದೆ, ಅದೊಂದು ಸಕ್ರಿಯ 'ಆತ್ಮಸಾಕ್ಷಿ ಅಭಿಯಾನ' (CONSCIENCE CAMPAIGN) ಆಗಿ ಬದಲಾಗಬೇಕು. ಪ್ರತಿ ಸಮುದಾಯದ ಜನರನ್ನು ಒಗ್ಗೂಡಿಸಿ, ಪರಸ್ಪರ ಗೌರವ ಮತ್ತು ನಂಬಿಕೆಯನ್ನು ಬೆಳೆಸುವ ಮೂಲಕ ಮಾತ್ರ ನಾವು ಈ ಮತಿಭ್ರಮಣೆಯಿಂದ ಹೊರಬರಲು ಸಾಧ್ಯ.

ಮುಕ್ತಾಯ: ಹೊಸ ಗೋಡೆಯ ನಿರ್ಮಾಣ ನಾವು ಇಂದು ನಿರ್ಮಿಸಬೇಕಾಗಿರುವುದು ಅಂತರವನ್ನು ಹೆಚ್ಚಿಸುವ ಗೋಡೆಗಳನ್ನಲ್ಲ, ಬದಲಾಗಿ ಮನುಷ್ಯರನ್ನು ಬೆಸೆಯುವ ಸೇತುವೆಗಳನ್ನು. ಅಸಮಾನತೆಯ ಗೋಡೆಯನ್ನು ಒಡೆದು ಹಾಕುವ ದಿಟ್ಟತನ ನಮ್ಮಲ್ಲಿ ಬರಬೇಕು. ಆ ಸ್ಥಳದಲ್ಲಿ ಪ್ರೀತಿಯ, ವಿಶ್ವಾಸದ ಮತ್ತು ಸಮಾನತೆಯ ನೂತನ ಬುನಾದಿಯನ್ನು ಹಾಕೋಣ. ಜಾತಿ, ಮತ, ಪಂಥಗಳೆಂಬ ಕಟ್ಟುಪಾಡುಗಳನ್ನು ಮೀರಿ, ಮನುಷ್ಯನಾಗಿ ಬದುಕುವ ಕಲೆ ನಮಗೆ ಸಿದ್ಧಿಸಿದಾಗ ಮಾತ್ರ ವಿವೇಕಾನಂದರು ಕಂಡ ಕನಸಿನ ಭಾರತ ನನಸಾಗಲು ಸಾಧ್ಯ.


ನಮ್ಮ ಆತ್ಮಸಾಕ್ಷಿಯೇ ನಮಗೆ ಪರಮ ದೈವವಾಗಲಿ. ಅಸಮಾನತೆಯ ಅಂಧಕಾರವನ್ನು ಹೋಗಲಾಡಿಸಲು, ನಮ್ಮ ಮನಸ್ಸಿನಿಂದಲೇ ಜಾಗೃತಿಯ ಕಿರಣಗಳನ್ನು ಪ್ರಸರಿಸುವ ಕೆಲಸವನ್ನು ಇಂದಿನಿಂದಲೇ, ಈ ಕ್ಷಣದಿಂದಲೇ ಪ್ರಾರಂಭಿಸೋಣ. ಈ ಆತ್ಮಸಾಕ್ಷಿ ಅಭಿಯಾನವೇ ನಮ್ಮ ದೇಶದ ಭವಿಷ್ಯದ ದಾರಿದೀಪವಾಗಲಿ.

# ಅರಿವು ಭಾರತ

# ಇತ್ತೀಚಿನ ಕಾರ್ಯಕ್ರಮಗಳು

# ಬೆಳಪನಹಳ್ಳಿ ಗ್ರಾಮದ ಸುಬ್ಬಾರೆಡ್ಡಿ ಅವರ ಮನೆಯಲ್ಲಿ ಸಹಭೋಜನ:

ಸಮಾನತೆಗಾಗಿ ಸಹಭೋಜನ: ಮುಳಬಾಗಿಲು ತಾಲೂಕಿನ ಬೆಳಪನಹಳ್ಳಿ ಗ್ರಾಮದ ಸುಬ್ಬಾರೆಡ್ಡಿ ಮನೆಯಲ್ಲಿ, ಜಿಲ್ಲಾಧಿಕಾರಿ ಡಾ ಎಂ ಆರ್ ರವಿ ಸೇರಿದಂತೆ ಅನೇಕರು ಭಾಗಿ














ಅದೇ ಬೆಳಪನಹಳ್ಳಿ ಗ್ರಾಮದ
ಅದೀಪ್ ಮನೆಯಲ್ಲಿ
ಸಮತೆಯ ಟೀ ಕಾರ್ಯಕ್ರಮ




07 June 2026

# ಸಮಾನತೆಯತ್ತ ಅರಿವು ಭಾರತದ ಹೆಜ್ಜೆ: ತೇರಹಳ್ಳಿಯ **ಭವ್ಯ ಮತ್ತು ಕಾವ್ಯರ** ಮನೆಯಲ್ಲಿ ಸಹಭೋಜನ **ಹಾಗೂ ಪ್ರತಿಜ್ಞಾವಿಧಿ**



ಕೋಲಾರದ ಬೆಟ್ಟದ ಮೇಲಿನ ತೇರಹಳ್ಳಿ ಗ್ರಾಮದಲ್ಲಿ ಭವ್ಯ ಮತ್ತು ಕಾವ್ಯ ಅವರ ಮನೆಯಲ್ಲಿ ಸಮಾನತೆಗಾಗಿ ಸಹಭೋಜನ, ನೆನಪಿನ ಗಿಡ ನಾಟಿ, ಪ್ರತಿಜ್ಞಾವಿಧಿ ಸ್ವೀಕಾರ ನಡೆಯಿತು. ಅರಿವು ಭಾರತ ತಂಡ ನೇತೃತ್ವ ವಹಿಸಿತ್ತು.










## ಹೊಸಮಟ್ನಹಳ್ಳಿಯ
## ನಾರಾಯಣಗೌಡರ ಮನೆಯಲ್ಲಿ ಸಹಭೋಜನ

ಕೋಲಾರ ತಾಲೂಕಿನ ಹೊಸಮಟ್ನಹಳ್ಳಿ ಗ್ರಾಮದ ರೈತ ಮುಖಂಡ ಕೆ ನಾರಾಯಣಗೌಡ ಅವರ ಮನೆಯಲ್ಲಿ ಸಹಭೋಜನ

14 June 2026










# ಶಾರದ ವಿದ್ಯಾ ಸಂಸ್ಥೆಯಲ್ಲಿ ಅರಿವು ಭಾರತ ಪ್ರತಿಜ್ಞೆ

ಮುಳಬಾಗಿಲು ನಗರದ ಶಾರದ ವಿದ್ಯಾ ಸಂಸ್ಥೆಯಲ್ಲಿ ಅರಿವು ಭಾರತ ಪ್ರತಿಜ್ಞೆ- ವಾರಿಧಿ ಮಂಜುನಾಥ ರೆಡ್ಡಿ ಪ್ರತಿಜ್ಞೆ ಬೋಧಿಸಿದರು. ತಾಯಲೂರ್ ಟಿ ರಮೇಶ್ ಮತ್ತು ಮಂಜು ಕನ್ನಿಕಾ ಮಾತನಾಡಿದರು.

15 June 2026









15 June 2026

# ಕೋಲಾರದಲ್ಲಿ ಗ್ರಾಮ ವಿಕಾಸದ MVN ರಾವ್ ನುಡಿ ನಮನ











ಕೋಲಾರದಲ್ಲಿ ಗ್ರಾಮ ವಿಕಾಸದ MVN ರಾವ್ ನುಡಿ ನಮನ. ರಾಜ್ಯದ ವಿವಿಧ ಭಾಗಗಳಿಂದ ಜನ ಬಂದಿದ್ದರು. ಅವರ ನೆನಪಲ್ಲಿ ಕುವೆಂಪು ಉದ್ಯಾನದಲ್ಲಿ ಆಳದ ಗಿಡ ನೆಡಲಾಯಿತು.

30 May 2026

# ಪತ್ರಿಕಾ ವರದಿಗಳು

ಬೆಳಪನಹಳ್ಳಿ ಗ್ರಾಮದ ಸಮಾನತೆಗಾಗಿ ಸಹಭೋಜನ ಕಾರ್ಯಕ್ರಮದಲ್ಲಿ ಡಾ. ಎಂ.ಆರ್.ರವಿ ಸಲಹೆ

## ಅಸ್ಪೃಶ್ಯತೆ ನಿರ್ಮೂಲನೆಗೆ ಸಂಕಲ್ಪ ಮಾಡಿ: ಜಿಲ್ಲಾಧಿಕಾರಿ

■ ಉದಯವಾಣಿ ಸಮಾಚಾರ

**ಮುಳಬಾಗಿಲು:** ಗ್ರಾಮೀಣ ಭಾರತದಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ. ಗ್ರಾಮೀಣ ಭಾರತದಲ್ಲಿ ಶಿಕ್ಷಣ ಸಿಕ್ಕಿದ್ದರೂ ಇದು ಸಂಪ್ರದಾಯ ಎಂದು ಅಸ್ಪೃಶ್ಯತೆಯನ್ನು ಉಳಿಸಿಕೊಂಡು ಬಂದಿರುವುದು ನಿಜಕ್ಕೂ ತಲೆತಗ್ಗಿಸುವ ವಿಷಯ. ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡಲು ಸಂಕಲ್ಪ ತೊಡಬೇಕು. ಸಂಕಲ್ಪದಿಂದಷ್ಟೇ ಭಾರತವನ್ನು ಅಸ್ಪೃಶ್ಯತೆ ಮುಕ್ತ ದೇಶವನ್ನಾಗಿ ಮಾಡಲು ಸಾಧ್ಯ ಎಂದು ಜಿಲ್ಲಾಧಿಕಾರಿ ಡಾ. ಎಂ.ಆರ್.ರವಿ ಹೇಳಿದರು.

ತಾಲೂಕಿನ ಆವಣಿ ಹೋಬಳಿ ಬೆಳಪನಹಳ್ಳಿ ಗ್ರಾಮದ ಅಚಲ ಗುರು ಸುಬ್ಬಾರೆಡ್ಡಿ ಮನೆಯಲ್ಲಿ ಅರಿವು ಭಾರತ ಏರ್ಪಡಿಸಿದ್ದ ಸಮಾನತೆಗಾಗಿ ಸಹಭೋಜನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.'ಗ್ರಾಮವೆಂದರೆ ಕೇವಲ ಭೌತಿಕ ಸೌಲಭ್ಯಗಳಿಂದ ಅಳೆಯುವುದೇ ಅಲ್ಲ; ಅಲ್ಲಿರುವ ಜನರ ಗುಣ, ಸಂಸ್ಕಾರ ಮತ್ತು ಒಳ್ಳೆಯತನವೇ ಅದರ ಮಹತ್ವವನ್ನು ತೋರಿಸುತ್ತದೆ. ಸುಬ್ಬರೆಡ್ಡಿಯಂತಹ ಗುರುಗಳು ಅಸ್ಪೃಶ್ಯತೆ ನಿರ್ಮೂಲನೆಗೆ ಮುಂದಾಳತ್ವ ವಹಿಸಿರುವುದು ಎಲ್ಲರೂ ಹೆಮ್ಮೆ ಪಡುವ ವಿಷಯ ಎಂದರು.



ತಾಲೂಕು ಬೆಳಪನಹಳ್ಳಿ ಗ್ರಾಮದ ಅಚಲ ಗುರು ಸುಬ್ಬಾರೆಡ್ಡಿ ಮನೆಯಲ್ಲಿ ಅರಿವು ಭಾರತ ಏರ್ಪಡಿಸಿದ್ದ ಸಮಾನತೆಗಾಗಿ ಸಹಭೋಜನ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ. ಎಂ.ಆರ್.ರವಿ ಉದ್ಘಾಟಿಸಿ ಮಾತನಾಡಿದರು. ಮಂಜುನಾಥ್, ಕೃಷ್ಣಮೂರ್ತಿ ಇದ್ದರು.

ಬೆಳಪನಹಳ್ಳಿ ಗ್ರಾಮವು ಒಂದು ರೀತಿಯ ತಪೋವನದ ಅನುಭವ ನೀಡುತ್ತಿದೆ. ಇಂತಹ ಪವಿತ್ರ ಸ್ಥಳದಲ್ಲಿ 'ಅರಿವು ಭಾರತ' ಕಾರ್ಯಕ್ರಮ ನಡೆಯುತ್ತಿರುವುದು ಅತ್ಯಂತ ಅರ್ಥಪೂರ್ಣ. ಕಳೆದ ಒಂದು ವರ್ಷದಿಂದ ನಾವು ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇವೆ. ಆದರೆ ಈ ಕಾರ್ಯಕ್ರಮ ಮಾತ್ರ ವಿಭಿನ್ನವಾಗಿದೆ ಎಂಬ ಭಾವನೆ ನನಗೆ ಬಂದಿದೆ. ಅದಕ್ಕೆ ಪ್ರಮುಖ ಕಾರಣ ಸನ್ಮಾನ್ಯ ಸುಬ್ಬಾರೆಡ್ಡಿ ಗುರುಗಳು ಎಂದರು.

ಅರಿವು ಯಾನ ಆನ್ಲೈನ್ ಮಾಸ ಪತ್ರಿಕೆಯನ್ನು ಬಿಡುಗಡೆ ಮಾಡಿದ ಕನ್ನಡ ಕ್ರಿಯಾ ಸಮಿತಿ ಮುಖಂಡ ವ.ಚ.ಚನ್ನೇಗೌಡ ಮಾತನಾಡಿ, ಪತ್ರಿಕೆಗಳು ಚಳುವಳಿಯ ಸಂದೇಶವನ್ನು ಜನಸಮುದಾಯಕ್ಕೆ ಮುಟ್ಟಿಸುತ್ತವೆ ಎಂದರು.

ಅಚಲಗುರು ಸುಬ್ಬಾರೆಡ್ಡಿಯವರು ಮಾತನಾಡಿ, ನಮ್ಮ ಆಶ್ರಮದಲ್ಲಿ ಎಲ್ಲರಿಗೂ ಪ್ರವೇಶವಿದೆ. ಯಾವುದೇ ತಾರತಮ್ಯವಿರುವುದಿಲ್ಲ. ಮನುಷ್ಯ ಕುಲಯಲ್ಲಿ ಜಾತಿಗಿಂತ ಗುಣ ದೊಡ್ಡದಾಗಬೇಕು ಎಂದರು. ಇದೇ ಗ್ರಾಮದ ನಾರಾಯಣಪ್ಪ ಅವರ ಮನೆಯಲ್ಲಿ ಸಮಾನತೆಯ ಟೀ ಏರ್ಪಡಿಸಲಾಗಿತ್ತು. ತಹಶೀಲ್ದಾರ್ ವಿ.ಗೀತಾ, ಅ.ಮು.ಲಕ್ಷ್ಮೀನಾರಾಯಣ, ರಾಮಲಿಂಗಾರೆಡ್ಡಿ, ಟಿಎಸ್.ರಮೇಶ್, ಕೌರಗಾನಹಳ್ಳಿ ಕೃಷ್ಣೇಗೌಡ, ಸರ್ವಜ್ಞಗೌಡ, ಜಯರಾಮರೆಡ್ಡಿ ಟಿ.ವಿಜಯಕುಮಾರ್, ಪಂಡಿತ್ ಮುನಿವೆಂಕಟಪ್ಪ ಡಾ.ಶಿವಪ್ಪ ಅರಿವು, ಓಂ ಪ್ರಕಾಶ್, ವಾರಿಧಿ ಮಂಜುನಾಥ್‌ರೆಡ್ಡಿ, ಮಂಜುಕನ್ನಿಕ, ಗೋಪಿ ಕರವಿ, ರಾಮಪ್ಪ ಅಶೋಕ. ಆನಂದರೆಡ್ಡಿ, ವೆಂಕಟೇಶ್‌ಗೌಡ, ಶ್ರೀಕೃಷ್ಣಾನಂದಮಯಿ ಕುಮಾರಿ ಅಮ್ಮನವರು, ಡಾ. ರುದ್ರೇಶ್ ಅದರಂಗಿ ಬೆಂಗಳೂರು ಶ್ರೀ ನಿಜಾನಂದಮಯಿ ಶಾಂತ ಮಾಂಬಾ, ಶ್ರೀತ್ರಿಗುಣತಿತ ಗೋವಿಂದಸ್ವಾಮಿ, ಶ್ರೀ ಪೂರ್ಣಾನಂದ ಪ್ರಕಾಶರೆಡ್ಡಿಸ್ವಾಮಿ, ಮುಬಾರಕ್ ಭಗವಾನ್, ರಾಧಾಮಣಿ ಬೆಳಕು, ಮೂಕಾಂಬಿಕಾ, ವೆಂಕಟಾಚಲಪತಿ ಈ ನೆಲ ಈ ಜಲ, ಮಂಜುನಾಥ್ ಟಿಚ್ಚಳ್ಳಿ ಕೃಷ್ಣಮೂರ್ತಿ, ರಾಮಕೃಷ್ಣಾರೆಡ್ಡಿ, ಗ್ರಾಮ ವಿಕಾಸ ಸಂಸ್ಥೆ ಗಿರಿಜಾ ಸೇರಿದಂತೆ ಹಲವಾರು ಜನರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

epaper.udayavani.com

ಉದಯವಾಣಿ Tue, 26 May 2026
https://epaper.udayavani.com/c/79963302

ಅಸ್ಪೃಶ್ಯತೆ ಮುಕ್ತ ಭಾರತ ಸಂಕಲ್ಪದಿಂದಷ್ಟೇ ಸಾಧ್ಯ: ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ

## ಬೆಳಪನಹಳ್ಳಿ: ಸಮಾನತೆಗಾಗಿ ಸಹಭೋಜನ

ಪ್ರಜಾವಾಣಿ ವಾರ್ತೆ

**ಮುಳಬಾಗಿಲು:** ಗ್ರಾಮೀಣ ಭಾರತದಲ್ಲಿ ಬಹುತೇಕರಿಗೆ ಶಿಕ್ಷಣ ಸಿಕ್ಕಿದರೂ ಅಸ್ಪೃಶ್ಯತೆ ಇನ್ನೂ ಜೀವಂತವಾಗಿರುವುದು ತಲೆತಗ್ಗಿಸುವ ವಿಷಯ. ಹಾಗಾಗಿ ಅಸ್ಪೃಶ್ಯತೆ ನಿರ್ಮೂಲನೆಗೆ ಎಲ್ಲರೂ ಸಂಕಲ್ಪ ಮಾಡಬೇಕಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ ಹೇಳಿದರು.

ತಾಲ್ಲೂಕಿನ ಬೆಳಪನಹಳ್ಳಿ ಗ್ರಾಮದಲ್ಲಿ ಭಾನುವಾರ ಅರಿವು ಭಾರತ ದಲಿತ ಗೃಹ ಪ್ರವೇಶ ಸಮಿತಿಯಿಂದ ಗ್ರಾಮದ ಅಚಲಗುರು ಸುಬ್ಬಾರೆಡ್ಡಿ ಅವರ ಮನೆಯಲ್ಲಿ ಏರ್ಪಡಿಸಿದ್ದ ಸಮಾನತೆಗಾಗಿ ಸಹಭೋಜನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಗ್ರಾಮವೆಂದರೆ ಕೇವಲ ಭೌತಿಕ ಸೌಲಭ್ಯಗಳಿಂದ ಅಳೆಯುವದೇ ಅಲ್ಲ, ಅಲ್ಲಿರುವ ಜನರ ಗುಣ, ಸಂಸ್ಕಾರ ಮತ್ತು ಒಳ್ಳೆತನವೇ ಅದರ ಮಹತ್ವ ತೋರಿಸುತ್ತದೆ ಎಂದರು.

ಬೆಳಪನಹಳ್ಳಿ ಗ್ರಾಮವು ಒಂದು ರೀತಿಯ ತಪೋವನದ ಅನುಭವ ನೀಡುತ್ತಿದೆ. ಇಂತಹ ಪವಿತ್ರ ಸ್ಥಳದಲ್ಲಿ ಅರಿವು ಭಾರತ ಕಾರ್ಯಕ್ರಮ ನಡೆಯುತ್ತಿರುವುದು ಅರ್ಥಪೂರ್ಣ ಮತ್ತು ವಿಶಿಷ್ಟವಾಗಿದೆ. ಕಳೆದ ಒಂದು ವರ್ಷದಿಂದ ನಾವು ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇವೆ. ಆದರೆ, ಈ ಕಾರ್ಯಕ್ರಮ ವಿಭಿನ್ನವಾಗಿದೆ ಎಂಬ ಭಾವನೆ ನೀಡುತ್ತಿದೆ ಎಂದು ಹೇಳಿದರು.

ನಂತರ ಅರಿವು ಯಾನ ಆನ್‌ಲೈನ್ ಮಾಸ ಪತ್ರಿಕೆಯನ್ನು ಬಿಡುಗಡೆ ಮಾಡಿದ ಕನ್ನಡ ಕ್ರಿಯಾ ಸಮಿತಿ ಮುಖಂಡ ವ.ಚ. ಚನ್ನೇಗೌಡ ಮಾತನಾಡಿ, ಪತ್ರಿಕೆಗಳು ಚಳುವಳಿಯ ಸಂದೇಶವನ್ನು ಜನಸಮುದಾಯಕ್ಕೆ ಮುಟ್ಟಿಸುತ್ತವೆ ಎಂದರು.

ಅಚಲಗುರು ಸುಬ್ಬಾರೆಡ್ಡಿ ಮಾಡನಾಡಿ, 'ನಮ್ಮ ಆಶ್ರಮದಲ್ಲಿ ಎಲ್ಲರಿಗೂ ಪ್ರವೇಶವಿದೆ. ಯಾವುದೇ ತಾರತಮ್ಯವಿರುವುದಿಲ್ಲ. ಮನುಷ್ಯ ಕುಲ ಅಥವಾ ಜಾತಿಗಿಂತ ಗುಣ ದೊಡ್ಡದಾಗಬೇಕು' ಎಂದು ಹೇಳಿದರು.

ನಂತರ ಗ್ರಾಮದ ನಾರಾಯಣಪ್ಪ ಅವರ ಮನೆಯಲ್ಲಿ ಸಮಾನತೆಯ ಟೀ ಕಾರ್ಯಕ್ರಮ ನಡೆಯಿತು.

ತಹಶೀಲ್ದಾರ್ ವಿ.ಗೀತಾ, ಅ.ಮು. ಲಕ್ಷ್ಮಿನಾರಾಯಣ, ರಾಮಲಿಂಗಾರೆಡ್ಡಿ, ಟಿ.ಎಸ್.ರಮೇಶ್, ಡಾ.ಅರಿವು ಶಿವಪ್ಪ, ಕೃಷ್ಣೇಗೌಡ ಕೌರಗಾನಹಳ್ಳಿ, ಸರ್ವಜ್ಞ ಗೌಡ, ಜಯರಾಮರೆಡ್ಡಿ, ಟಿ.ವಿಜಯಕುಮಾರ್, ಪಂಡಿತ್ ಮನವಿಕಟ್ಟಪ್ಪ, ಓಂ ಪ್ರಕಾಶ್, ವಾರಿಧಿ ಮಂಜುನಾಥ್ ರೆಡ್ಡಿ, ಮಂಜುಕನ್ನಿಕ, ಗೋಪಿ ಕರವಿ, ರಾಮಪ್ಪ, ಅಶೋಕ ಆನಂದ ರೆಡ್ಡಿ, ವೆಂಕಟೇಶ್ ಗೌಡ, ಶ್ರೀ ಕೃಷ್ಣಾನಂದಮಯಿ ಕುಮಾರಿ ಅಮ್ಮನವರು, ರುದ್ರೇಶ್ ಅದರಂಗಿ, ನಿಜಾನಂದಮಯಿ ಶಾಂತ ಮಾಂಬಾ, ತ್ರಿಗುಣತಿತ ಗೋವಿಂದ ಸ್ವಾಮಿ, ಪೂರ್ಣಾನಂದ ಪ್ರಕಾಶ ರೆಡ್ಡಿ ಸ್ವಾಮಿ, ಮುಬಾರಕ್, ಭಗವಾನ್, ರಾಧಾಮಣಿ ಬೆಳಕು ಇತರರು ಇದ್ದರು.



ಮುಳಬಾಗಿಲು ತಾಲ್ಲೂಕಿನ ಬೆಳಪನಹಳ್ಳಿ ಗ್ರಾಮದಲ್ಲಿ ದಲಿತ ಗೃಹ ಪ್ರವೇಶ ಕಾರ್ಯಕ್ರಮದಲ್ಲಿ ಸಾಮೂಹಿಕ ಭೋಜನ ನಡೆಯಿತು

Publication Date 26/05/2026

Presented by

# ತೇರಹಳ್ಳಿ ಈಶ್ವರ ದೇಗುಲಕ್ಕೆ ದಲಿತರ ಪ್ರವೇಶ

## ಅರಿವು ಭಾರತದಿಂದ ಸಮಾನತೆಗಾಗಿ ಸಹಭೋಜನ, 800 ವರ್ಷಗಳ ಇತಿಹಾಸವಿರುವ ದೇವಸ್ಥಾನ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಕೋಲಾರ ತಾಲ್ಲೂಕಿನ ತೇರಹಳ್ಳಿ ಗ್ರಾಮದಲ್ಲಿ ಆಯೋಜನೆ
- ಗ್ರಾಮದ ಭವ್ಯಾ, ಕಾವ್ಯಾಗೆ ಗ್ರಾಮರತ್ನ' ಪ್ರಶಸ್ತಿ ಪ್ರದಾನ
- ಮಾನವನ ಮೂಲವನರಿತವರು ತಾರತಮ್ಯ ಮಾಡಲಾರರು

ಕೋಲಾರ: ಅರಿವು ಭಾರತ ಸಂಸ್ಥೆ ಆಶ್ರಯದಲ್ಲಿ 'ನಮ್ಮ ನಡೆ ಅಸ್ಪೃಶ್ಯತೆ ಮುಕ್ತ ಭಾರತದೆಡೆಗೆ' ಪರಿಕಲ್ಪನೆಯಡಿ ತಾಲ್ಲೂಕಿನ ಬೆಟ್ಟದಲ್ಲಿರುವ ತೇರಹಳ್ಳಿಯ ಭವ್ಯಾ ಹಾಗೂ ಕಾವ್ಯಾ ಅವರ ನಿವಾಸದಲ್ಲಿ ಭಾನುವಾರ ಸಮಾನತೆಗಾಗಿ ಸಹಭೋಜನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸುಮಾರು 800 ವರ್ಷಗಳ ಇತಿಹಾಸವಿರುವ ತೇರಹಳ್ಳಿಯ ಈಶ್ವರ ದೇವಾಲಯದಲ್ಲಿ ಜಾತಿ ತಾರತಮ್ಯವಿಲ್ಲದೆ ಪೂಜೆ ಸಲ್ಲಿಸಲಾಯಿತು. ದಲಿತರಿಗೆ ದೇಗುಲ ಪ್ರವೇಶ ಮಾಡಿಸಲಾಯಿತು. ಒಕ್ಕಲಿಗ ಸಮುದಾಯದ ಭವ್ಯಾ ಅವರ ನಿವಾಸದಿಂದ ಮೆರವಣಿಗೆಯಲ್ಲಿ ತಮಟೆ ವಾದನದೊಂದಿಗೆ ದೇಗುಲಕ್ಕೆ ತೆರಳಲಾಯಿತು. ಬಳಿಕ ಸಹಭೋಜನ ಕಾರ್ಯಕ್ರಮ ನಡೆಯಿತು. ಸ್ಥಳೀಯ ದಲಿತರೂ ಸೇರಿದಂತೆ ಎಲ್ಲಾ ಸಮುದಾಯದವರು ಒಟ್ಟಿಗೆ ಊಟ ಮಾಡಿದರು. ತಮಿಳುನಾಡು, ಆಂಧ್ರದಿಂದ ಬಂದಿದ್ದ ಗಾಯಕರು ಅಚಲ ತತ್ವಪದ ಹಾಡಿದರು.

ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ್ದ ಬೆಳಪನಹಳ್ಳಿಯ ಅಚಲ ಮಠದ ನಿಜಾನಂದ ಸುಬ್ಬಾರೆಡ್ಡಿ ಸ್ವಾಮಿ ಮಾತನಾಡಿ 'ಶಿಲಾಯುಗದಲ್ಲಿ ಇಲ್ಲದ ಅದೆಷ್ಟೋ ವಾಡಿಕೆಗಳು ಮತ್ತು ತಾರತಮ್ಯಗಳು ಈಗಿನ ಆಧುನಿಕ ಸಮಾಜವನ್ನು ಹಾಳುಗೆಡುವುತ್ತಿವೆ. ಎಲ್ಲಿಂದ ಬಂದೆವೆಂಬ ಸಣ್ಣ ತಿಳಿವಳಿಕೆ ಇದ್ದಿದ್ದರೆ ಎಲ್ಲರನ್ನೂ ಸಮಾನವಾಗಿ ಕಾಣುವ ಗುಣ ಬೆಳೆಯುತಿತ್ತು' ಎಂದರು.

ದಲಿತ ಮುಖಂಡ ಟಿ.ವಿಜಯಕುಮಾರ್ ಮಾತನಾಡಿ, 'ಬದಲಾವಣೆಗೆ ಯುವಕರು ಮುಂದಾಗಬೇಕು. ಯುವಕರಲ್ಲಿ ಧೈರ್ಯ ಇರುವುದರಿಂದ ಅಸ್ಪೃಶ್ಯತೆಯಂತಹ ಅಮಾನವೀಯ ನಡೆಯನ್ನು ತಿದ್ದಬಲ್ಲರು. ಧೈರ್ಯದಿಂದಷ್ಟೇ ಅಜ್ಞಾನವನ್ನು ತಿದ್ದಿ ಸರಿಪಡಿಸಿಕೊಳ್ಳಲು ಸಾಧ್ಯ' ಎಂದು ಹೇಳಿದರು.

ಹೋರಾಟಗಾರ್ತಿ ಮಮತಾರೆಡ್ಡಿ ಮಾತನಾಡಿ, 'ಬೆಟ್ಟದ ಮೇಲಿನ ಹಳ್ಳಿಗಳಿಗೆ ರಸ್ತೆ ಬಂದ ಮೇಲೆ ರಿಯಲ್ ಎಸ್ಟೇಟ್ ದಂಧೆ ಹೆಚ್ಚಾಗಿದ್ದು ಸ್ಥಳೀಯರಿಗೆ ತೊಂದರೆಯಾಗಿದೆ. ಇಲ್ಲಿನ ಜನರ ಹಲವು ಸಂಕಷ್ಟಗಳಿಗೆ ಆಡಳಿತ ಸ್ಪಂದಿಸಬೇಕು' ಎಂದರು.

ಮುಜರಾಯಿ ತಹಶೀಲ್ದಾರ್ ಶ್ರೀನಿವಾಸರೆಡ್ಡಿ ಸಹಭೋಜನ ಉದ್ಘಾಟಿಸಿದರು. ಡಿ.ಆರ್. ರಾಜಪ್ಪ ಅರಿವು ಭಾರತ ಆಶಯಗೀತೆಯನ್ನು ಹಾಡಿದರು. ವಾರಿಧಿ ಮಂಜುನಾಥರೆಡ್ಡಿ ಪ್ರತಿಜ್ಞಾವಿಧಿ ಬೋಧಿಸಿದರು, ಮುಂಜುಳ ಕೊಂಡರಾಜನಹಳ್ಳಿ ಕಾರ್ಯಕ್ರಮವನ್ನು ನಿರೂಪಿಸಿದರು, ಗೋಪಿನಾಥ್ ಕರವಿ ವಂದಿಸಿದರು.

ಬೌದ್ಧ ಭಂತೇಜಿ, ಅರಿವು ಭಾರತ ಸಂಸ್ಥೆಯ ಅರಿವು ಶಿವಪ್ಪ, ಆದಿಮ ಸಾಂಸ್ಕೃತಿಕ ಕೇಂದ್ರದ ಹ.ಮಾ.ರಾಮಚಂದ್ರ, ಮುಖಂಡರಾದ ಪ್ರಕಾಶ್, ಲೋಕೇಶ್ ಹಿಂಡಿಹನಾಳ, ಹೂವಹಳ್ಳಿ ನಾಗರಾಜ್, ಮಂಜು ಕನ್ನಿಕ, ಟೈಗರ್ ವೆಂಕಟೇಶ್, ಗ್ರಾಮದ ಟಿ.ತಿಮ್ಮರಾಯಪ್ಪ, ಕೃಷ್ಣಪ್ಪ, ಚೌಡಪ್ಪ, ರವಿ ದಮ್ಮಮಿತ್ರ, ತೇಜಸ್ವಿನಿ, ಮನೋಜ್ ಹಾಗೂ ವಿವಿಧ ಸಂಘಟನೆಗಳ ಮುಖಂಡರು ಪಾಲ್ಗೊಂಡಿದ್ದರು.



ಕೋಲಾರ ತಾಲ್ಲೂಕಿನ ತೇರಹಳ್ಳಿಯಲ್ಲಿ ಅರಿವು ಭಾರತ ಸಂಸ್ಥೆ ಹಮ್ಮಿಕೊಂಡಿದ್ದ ಸಹಭೋಜನ ಕಾರ್ಯಕ್ರಮದಲ್ಲಿ ಈಶ್ವರ ದೇಗುಲದಲ್ಲಿ ಜಾತಿ ತಾರತಮ್ಯವಿಲ್ಲದೆ ಪೂಜೆ ಸಲ್ಲಿಸಲಾಯಿತು. ದಲಿತರಿಗೆ ದೇಗುಲ ಪ್ರವೇಶ ಮಾಡಿಸಲಾಯಿತು

### ಗ್ರಾಮರತ್ನ ಪ್ರಶಸ್ತಿ

ಭವ್ಯಾ ಹಾಗೂ ಕಾವ್ಯಾ ಅವರಿಗೆ ಗ್ರಾಮರತ್ನ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಯಿತು. ಗ್ರಾಮವಿಕಾಸ ಮತ್ತು ರೋಟರಿಯಿಂದ 'ನೆನಪಿನ ಗಿಡ' ನೆಡಲಾಯಿತು. ಇದೇ ಸಂದರ್ಭದಲ್ಲಿ ಗೋಪಿನಾಥ ಕರವಿ ನಾಯಕತ್ವದ 'ಗ್ರಾಮ ಬೆಳಕು' ಸಂಸ್ಥೆಯ ಉದ್ಘಾಟನೆ ಮಾಡಲಾಯಿತು.

**ವೇಮನ, ಕೈವಾರ ತಾತ ತೋರಿದ ದಾರಿಯನ್ನು ಮೆಲುಕು ಹಾಕಬೇಕು, ಮಧ್ಯದಲ್ಲಿ ಹುಟ್ಟಿದ ಜಾತಿಯ ಹುಚ್ಚನ್ನು ಬಿಟ್ಟು ಎಲ್ಲರನ್ನೂ ಗೌರವದಿಂದ ಕಾಣಬೇಕು ನಿಜಾನಂದ ಸುಬ್ಬಾರೆಡ್ಡಿ ಸ್ವಾಮಿ,** ಬೆಳಪನಹಳ್ಳಿಯ ಅಚಲ ಮಠದ



ತೇರಹಳ್ಳಿಯ ಭವ್ಯಾ, ಕಾವ್ಯಾ ಅವರ ನಿವಾಸದಲ್ಲಿ ಸಮಾನತೆಗಾಗಿ ಸಹಭೋಜನ ನಡೆಯಿತು

Publication Date

---

ನಂ1 ವಿಜಯವಾಣಿ ಕನ್ನಡ ದಿನಪತ್ರಿಕೆ | ಕೋಲಾರ ಲೋಕಲ್ ಎಕ್ಸ್‌ಪ್ರೆಸ್ | 6A

ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ ಕಳವಳ | ಬೆಳಪನಹಳ್ಳಿಯಲ್ಲಿ ಸಹಭೋಜನ ಕಾರ್ಯಕ್ರಮ

# ಅಸ್ಪೃಶ್ಯ ಆಚರಣೆ ದುರಂತ



ಮುಳಬಾಗಿಲು ತಾಲೂಕು ಬೆಳಪನಹಳ್ಳಿಯಲ್ಲ ಏರ್ಪಡಿಸಿದ್ದ ಸಮಾನತೆಗಾಗಿ ಸಹಭೋಜನ ಕಾರ್ಯಕ್ರಮದಲ್ಲಿ ಡಿಸಿ ಡಾ.ಎಂ.ಆರ್.ರವಿ, ಕನ್ನಡ ಕ್ರಿಯಾ ಸಮಿತಿ ಮುಖಂಡ ವ.ಚ.ಚನ್ನೇಗೌಡ , ಮಂಜು ಕನ್ನಿಕ, ಗೋಪಿನಾಥ್ ಕರವಿ, ರಾಮಪ್ಪ, ಅಶೋಕ, ಆನಂದ ರೆಡ್ಡಿ, ವೆಂಕಟೇಶ್ ಗೌಡ, ಶ್ರೀ ಕೃಷ್ಣಾನಂದಮಯಿ ಕುಮಾರಿ ಅಮ್ಮ, ಡಾ.ರುದ್ರೇಶ್ ಆದರಂಗಿ ಬೆಂಗಳೂರು, ಶ್ರೀ ನಿಜಾನಂದಮಯಿ ಶಾಂತ ಮಾಂಬಾ ಇದ್ದರು.

■ ವಿಜಯವಾಣಿ ಸುದ್ದಿಜಾಲ ಮುಳಬಾಗಿಲು

ಗ್ರಾಮೀಣ ಭಾರತದಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ. ಶಿಕ್ಷಿಕರು ಸಹ ಸಂಪ್ರದಾಯ ಹೆಸರಲ್ಲಿ ಇನ್ನೂ ಇದನ್ನು ಆಚರಿಸಿಕೊಂಡು ಬರುತ್ತಿರುವುದು ದುರಂತ. ಅಸ್ಪೃಶ್ಯ ನಿರ್ಮೂಲನೆ ಮಾಡಲು ಸಂಕಲ್ಪ ತೊಡಬೇಕು ಎಂದು ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ ಹೇಳಿದರು.

ತಾಲೂಕಿನ ಬೆಳಪನಹಳ್ಳಿಯ ಅಚಲಗುರು ಸುಬ್ಬಾರೆಡ್ಡಿ ಮನೆಯಲ್ಲಿ ಭಾನುವಾರ ಅರಿವು ಭಾರತದಿಂದ ಏರ್ಪಡಿಸಿದ್ದ 'ಸಮಾನತೆಗಾಗಿ ಸಹಭೋಜನ' ಕಾರ್ಯಕ್ರಮದಲ್ಲಿ ಮಾತನಾಡಿ, ಗ್ರಾಮವನ್ನು ಕೇವಲ ಭೌತಿಕ ಸೌಲಭ್ಯಗಳಿಂದ ಅಳೆಯುವದಲ್ಲ. ಜನರ ಗುಣ, ಸಂಸ್ಕಾರ ಮತ್ತು ಒಳ್ಳೆಯ ಮಹತ್ವವನ್ನು ಗ್ರಾಮಗಳು ತಿಳಿಸುತ್ತವೆ ಎಂದರು.

ಬೆಳಪನಹಳ್ಳಿಯು ತಪೋವನದ ಅನುಭವ ನೀಡುತ್ತಿದೆ. ಇಂತಹ ಪವಿತ್ರ ಸ್ಥಳದಲ್ಲಿ ಅರಿವು ಭಾರತ ಕಾರ್ಯಕ್ರಮ ಆಯೋಜಿಸಿರುವುದು ಅರ್ಥಪೂರ್ಣ ಮತ್ತು ವಿಶಿಷ್ಟವಾಗಿದೆ. ಒಂದು ವರ್ಷದಿಂದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇವೆ. ಆದರೆ ಈ ಕಾರ್ಯಕ್ರಮ ವಿಭಿನ್ನವಾಗಿದೆ ಎಂದು ಹೇಳಿದರು.

ಗುರುಪರಂಪರೆಯಲ್ಲಿ ಇರುವ ಕರುಣೆ, ಮಾನವೀಯತೆ ಮತ್ತು ಸಮಾನತೆಯ ಸಂದೇಶ ನಿಜಕ್ಕೂ ಪ್ರೇರಣಾದಾಯಕವಾಗಿದೆ. ಭಜನೆ, ಧ್ಯಾನ ಮತ್ತು ಸತ್ಸಂಗಗಳ ಮೂಲಕ ಅವರು ಸಮಾಜದಲ್ಲಿ ಮಾನವೀಯ ಮೌಲ್ಯ ಬೆಳೆಸುತ್ತಾರೆ ಎಂದು ಹೇಳಿದರು.

ಅಚಲಗುರು ಸುಬ್ಬಾರೆಡ್ಡಿ ಮಾಡನಾಡಿ, ನಮ್ಮ ಆಶ್ರಮದಲ್ಲಿ ಎಲ್ಲರಿಗೂ ಪ್ರವೇಶವಿದೆ. ಯಾವುದೇ ತಾರತಮ್ಯವಿರುವುದಿಲ್ಲ. ಮನುಷ್ಯತ್ವ ಜಾತಿ, ಕುಲಕ್ಕಿಂತ ದೊಡ್ಡದಾಗಬೇಕು ಎಂದರು.

ಗ್ರಾಮದ ನಾರಾಯಣಪ್ಪ ಮನೆಯಲ್ಲಿ ಸಮಾನತೆ ಸಾರುವ ನಿಟ್ಟಿನಲ್ಲಿ ಚಹಾ ಸೇವನೆ ಏರ್ಪಡಿಸಲಾಗಿತ್ತು.

ಶ್ರೀ ತ್ರಿಗುಣತೀತ ಗೋವಿಂದ ಸ್ವಾಮಿ, ಶ್ರೀ ಪೂರ್ಣಾನಂದ ಪ್ರಕಾಶ ರೆಡ್ಡಿ ಸ್ವಾಮಿ, ಮುಬಾರಕ್ ಭಗವಾನ್, ರಾಧಾಮಣಿ ಬೆಳಕು, ಮೂಕಾಂಬಿಕಾ, ವೆಂಕಟಾಚಲಪತಿ, ಮಂಜುನಾಥ್ ಪಿಚ್ಚಳ್ಳಿ, ಕೃಷ್ಣಮೂರ್ತಿ, ರಾಮಕೃಷ್ಣ ರೆಡ್ಡಿ, ಗ್ರಾಮ ವಿಕಾಸ ಸಂಸ್ಥೆ ಗಿರಿಜಾ ಇದ್ದರು.

---

ಸಂಯುಕ್ತ ಕರ್ನಾಟಕ | ಅಮೃತಧಾರೆ | ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ದರ್ಶನ

# ಮಾನವ ಮೂಲವರಿತವರು ಜಾತಿ ತಾರತಮ್ಯ ಮಾಡಲಾರರು

## ತೇರಹಳ್ಳಿ ಬೆಟ್ಟದಲ್ಲಿ 'ಭವ್ಯ'ವಾಗಿ ಹರಿದ ಜಾತ್ಯತೀತತೆಯ 'ಕಾವ್ಯ'ಧಾರೆ

ಸಂ.ಕ ಸಮಾಚಾರ, ಕೋಲಾರ

ಶಿಲಾಯುಗದಲ್ಲಿ ಇಲ್ಲದ ಅದೆಷ್ಟೋ ವಾಡಿಕೆಗಳು ಮತ್ತು ತಾರತಮ್ಯಗಳು ಈಗಿನ ಆಧುನಿಕ ಸಮಾಜವನ್ನು ಹಾಳುಗೆಡುವುತ್ತಿವೆ. ಎಲ್ಲಿಂದ ಬಂದೆವೆಂಬ ಸಣ್ಣ ತಿಳುವಳಿಕೆ ಇದ್ದರೆ ಎಲ್ಲರನ್ನೂ ಸಮಾನವಾಗಿ ಕಾಣುವ ಗುಣ ಬೆಳೆಯುತ್ತದೆ ಎಂದು ಮುಳಬಾಗಿಲು ತಾಲೂಕು ತಾಯಲೂರು ಸಮೀಪದ ಬೆಳಪನಹಳ್ಳಿ ಅಚಲಮಠದ ಗುರು ಸುಬ್ಬಾರೆಡ್ಡಿ ಹೇಳಿದರು.

ಭಾನುವಾರ ನಗರಕ್ಕೆ ಸಮೀಪದ ತೇರಹಳ್ಳಿ ಬೆಟ್ಟದ ಮೇಲಿನ ಭವ್ಯ ಮತ್ತು ಕಾವ್ಯ ಅವರ ಮನೆಯಲ್ಲಿ ಅರಿವು ಭಾರತ ಸಂಸ್ಥೆ ಏರ್ಪಡಿಸಿದ್ದ ಸಮಾನತೆಗಾಗಿ ಸಹಭೋಜನ ಕಾರ್ಯಕ್ರಮದಲ್ಲಿ ಮಾತನಾಡಿ ವೇಮನ, ಕೈವಾರ ತಾತಯ್ಯ ತೋರಿದ ದಾರಿಯನ್ನು ಮೆಲುಕು ಹಾಕಬೇಕು, ಮಧ್ಯದಲ್ಲಿ ಹುಟ್ಟಿದ ಜಾತಿಯ ಹುಚ್ಚನ್ನು ಬಿಟ್ಟು ಎಲ್ಲರನ್ನೂ ಗೌರವದಿಂದ ಕಾಣಬೇಕು ಎಂದರು.

ಯುವಕರಲ್ಲಿ ಧೈರ್ಯ ಇರುವುದರಿಂದ ಅಸ್ಪೃಶ?ಯತೆಯಂತಹ ಅಮಾನವೀಯ ನಡೆಯನ್ನು ತಿದ್ದಬಲ್ಲರು. ಧೈರ್ಯದಿಂದಷ್ಟೇ ಅಜ್ಞಾನವನ್ನು ಸರಿ ತಿದ್ದಿಕೊಳ್ಳಲು ಸಾಧ್ಯ ಎಂದು ದಲಿತ ಮುಖಂಡ ಟಿ.ವಿಜಯಕುಮಾರ್ ಹೇಳಿದರು.

ಬೆಟ್ಟದ ಮೇಲಿನ ಹಳ್ಳಿಗಳಿಗೆ ರಸ್ತೆ ಬಂದ ಮೇಲೆ ರಿಯಲ್ ಎಸ್ಟೇಟ್ ದಂಧೆ ಹೆಚ್ಚಾಗಿದ್ದು ಸ್ಥಳೀಯರಿಗೆ ತೊಂದರೆಯಾಗಿದೆ. ಇಲ್ಲಿನ ಜನರ ಹಲವು ಸಂಕಷ್ಟಗಳಿಗೆ ಆಡಳಿತ ಸ್ಪಂದಿಸಬೇಕು ಎಂದು ಮಹಿಳಾ ಸಹಾಯವಾಣಿಯ ಮಮತಾರೆಡ್ಡಿ ತಿಳಿಸಿದರು.



ತೇರಹಳ್ಳಿ ಈಶ್ವರ ದೇವಾಲಯದಲ್ಲಿ ಜಾತಿ ತಾರತಮ್ಯವಿಲ್ಲದೆ ಪೂಜೆ ಸಲ್ಲಿಸಿದ ಬಳಿಕ ಭವ್ಯ ಮತ್ತು ಕಾವ್ಯರ ಮನೆಯಲ್ಲಿ ಸಹಭೋಜನ ನಡೆಯಿತು.

ಸ್ಥಳೀಯ ದಲಿತರೂ ಸೇರಿದಂತೆ ಎಲ್ಲಾ ಸಮುದಾಯದವರು ಒಟ್ಟಿಗೆ ಊಟ ಮಾಡಿದರು.

ಗ್ರಾಮವಿಕಾಸ ಮತ್ತು ರೋಟರಿ ವತಿಯಿಂದ 'ನೆನಪಿನ ಗಿಡ' ನೆಡಲಾಯಿತು. ಇದೇ ಸಂದರ್ಭದಲ್ಲಿ ಗೋಪಿನಾಥ ಕರವಿ ನಾಯಕತ್ವದ 'ಗ್ರಾಮ ಬೆಳಕು' ಸಂಸ್ಥೆ ಉದ್ಘಾಟನೆ ಮಾಡಲಾಯಿತು.

ಮುಜರಾಯಿ ತಹಶೀಲ್ದಾರ್ ಶ್ರೀನಿವಾಸರೆಡ್ಡಿ, ನಾಟಕ ಅಕಾಡಮಿ ಸದಸ್ಯ ಡಿ.ಆರ್.ರಾಜಪ್ಪ, ವಾರಿಧಿ ಮಂಜುನಾಥರೆಡ್ಡಿ, ಮುಂಜುಳ ಕೊಂಡರಾಜನಹಳ್ಳಿ, ಒಲಿವಿಯಾ ಓಂಪ್ರಕಾಶ್, ಲೋಕೇಶ್ ಹಿಂಡಿಗನಾಳ, ಹೂವಳ್ಳಿ ನಾಗರಾಜ್, ಮುಳಬಾಗಿಲು ಮಂಜುಕನ್ನಿಕ, ಟೈಗರ್ ವೆಂಕಟೇಶ್, ತೇರಹಳ್ಳಿ ಟಿ.ತಿಮ್ಮರಾಯಪ್ಪ, ಕೃಷ್ಣಪ್ಪ, ಚೌಡಪ್ಪ, ರವಿ ದಮ್ಮಮಿತ್ರ, ತೇಜಸ್ವಿನಿ, ಮನೋಜ್ ಪೆದ್ದೂರು ಭಾಗವಹಿಸಿದ್ದರು.



ಅರಿವು ಭಾರತ

Arivu Bharat
1st Cross, 1111st Main Road,
Muneshwara Nagar
Kolar – 563101
Ph: 9448663904, 9449652631
www.arivubharat.com